Re. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**( EXTRAORDINARY )**
( ವಿಶೇಷ ಸಂಚಿಕೆ )

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

**प्राधिकार से प्रकाशित**
**Published by Authority**
**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.**

| | | | |
|---|---|---|---|
| सं. १ | नई दिल्ली, शुक्रवार, एप्रील ६, २०१२ | वैशाक १७, १९३४ (शाका) | खंड. ४८ |
| No. 1 | New Delhi, Friday, April 6, 2012 | Vaishakha 17, 1934 (Saka) | Vol. 48 |
| ಸಂ. ೧ | ನವ ದೆಹಲಿ, ಶುಕ್ರವಾರ, ಏಪ್ರಿಲ್ ೬, ೨೦೧೨ | ವೈಶಾಖ ೧೭, ೧೯೩೪ (ಶಕ) | ಸಂಪುಟ. ೪೮ |


**Ministry of Law and Justice**
(Legislative Department)
New Delhi, 6th April, 2012

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 6ನೇ ಏಪ್ರಿಲ್, 2012**

The Translation in Kannada of the following Acts, namely :- (1) The Energy Conservation Act, 2001 (2) The Haj Committee Act, 2002 (3) The Multi-State Co-operative Societies Act, 2002 (4) The Central Educational Institutions (Reservation in Admission) Act, 2006 (5) The Government Securities Act, 2006 (6) The Science and Engineering Research Board Act, 2008 (7) The Unorganised Workers Social Security Act, 2008 (8) The National Investigation Agency Act, 2008 and (9) The Right of Children to Free and Compulsory Education Act, 2009 - are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮ ಎಂದರೆ:- (1) ಇಂಧನ ಶಕ್ತಿ ಸಂರಕ್ಷಣಾ ಅಧಿನಿಯಮ, 2001 (2) ಹಜ್ ಸಮಿತಿ ಅಧಿನಿಯಮ, 2002 (3) ಬಹು-ರಾಜ್ಯ ಸಹಕಾರಿ ಸೊಸೈಟಿಗಳ ಅಧಿನಿಯಮ, 2002 (4) ಕೇಂದ್ರೀಯ ಶಿಕ್ಷಣ ಸಂಸ್ಥೆಗಳ (ಪ್ರವೇಶದಲ್ಲಿ ಮೀಸಲಾತಿ) ಅಧಿನಿಯಮ, 2006 (5) ಸರ್ಕಾರಿ ಭದ್ರತಾ ಪತ್ರಗಳ ಅಧಿನಿಯಮ, 2006 (6) ವಿಜ್ಞಾನ ಮತ್ತು ಇಂಜಿನಿಯರಿಂಗ್ ಸಂಶೋಧನಾ ಮಂಡಳಿ ಅಧಿನಿಯಮ, 2008 (7) ಅಸಂಘಟಿತ ಕೆಲಸಗಾರರ ಸಾಮಾಜಿಕ ಭದ್ರತಾ ಅಧಿನಿಯಮ, 2008 (8) ರಾಷ್ಟ್ರೀಯ ತನಿಖಾ ಏಜೆನ್ಸಿ ಅಧಿನಿಯಮ, 2008 ಮತ್ತು (9) ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, 2009 – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

The Energy Conservation Act-2001

# ಇಂಧನ ಶಕ್ತಿ ಸಂರಕ್ಷಣಾ ಅಧಿನಿಯಮ, 2001

(2001ರ ಅಧಿನಿಯಮ ಸಂಖ್ಯೆ 52)

[29ನೇ ಸೆಪ್ಟೆಂಬರ್, 2001]

ಇಂಧನ ಶಕ್ತಿಯನ್ನು ಸಮರ್ಥವಾಗಿ ಬಳಸುವುದಕ್ಕಾಗಿ ಮತ್ತು ಅದರ ಸಂರಕ್ಷಣೆಗಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಐವತ್ತೆರಡನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.-

## ಅಧ್ಯಾಯ - I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಇಂಧನಶಕ್ತಿ ಸಂರಕ್ಷಣಾ ಅಧಿನಿಯಮ, 2001 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ *ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಯಾವುದೇ ಅಂಥ ಉಪಬಂಧದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಮಾಡಿದ ಯಾವುದೇ ಉಲ್ಲೇಖವನ್ನು ಆ ಉಪಬಂಧವು ಜಾರಿಗೆ ಬರುವುದಕ್ಕೆ ಮಾಡಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಂಗೀಕೃತ ಇಂಧನಶಕ್ತಿ ಸಂಪರೀಕ್ಷಕ" ಎಂದರೆ 13ನೇ ಪ್ರಕರಣದ (2)ನೇ ಉಪಪ್ರಕರಣದ (ಪಿ) ಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ಅರ್ಹತೆಗಳನ್ನು ಹೊಂದಿರುವ ಲೆಕ್ಕಪರಿಶೋಧಕ;

(ಬಿ) "ಅಪೀಲು ನ್ಯಾಯಾಧಿಕರಣ" ಎಂದರೆ 30ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಇಂಧನಶಕ್ತಿ ಸಂರಕ್ಷಣಾ ಅಪೀಲು ನ್ಯಾಯಾಧಿಕರಣ;

(ಸಿ) "ಕಟ್ಟಡ" ಎಂದರೆ, 15ನೇ ಪ್ರಕರಣದ (ಎ) ಖಂಡದ ಮೇರೆಗೆ ಅಥವಾ 56ನೇ ಪ್ರಕರಣದ (2)ನೇ ಉಪಪ್ರಕರಣದ (ಎಲ್) ಖಂಡದ ಮೇರೆಗೆ ಇಂಧನಶಕ್ತಿ ಸಂರಕ್ಷಣಾ ಕಟ್ಟಡ ಸಂಹಿತೆಗಳಿಗೆ ಸಂಬಂಧಿಸಿದ ನಿಯಮಗಳು ಅಧಿಸೂಚಿತವಾದ ನಂತರ, 500 ಕಿ.ವ್ಯಾ. ಜೋಡಿಸಿದ ಸಾಮರ್ಥ್ಯ ಹೊಂದಿರುವ ಅಥವಾ 600 ಕೆ.ವಿ.ಎ. ಮತ್ತು ಅದಕ್ಕೂ ಮೇಲ್ಪಟ್ಟು ಕರಾರು ಬೇಡಿಕೆ ಹೊಂದಿರುವ ಹಾಗೂ ವಾಣಿಜ್ಯ ಉದ್ದೇಶಗಳಿಗಾಗಿ ಉಪಯೋಗಿಸಲು ಉದ್ದೇಶಿಸಲಾದ ಯಾವುದೇ ರಚನೆ ಅಥವಾ ನಿರ್ಮಾಣ ಅಥವಾ ರಚನೆಯ ಅಥವಾ ನಿರ್ಮಾಣದ ಯಾವುದೇ ಭಾಗ;

(ಡಿ) "ಬ್ಯೂರೋ" ಎಂದರೆ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪನೆಯಾದ ಇಂಧನಶಕ್ತಿ ಕಾರ್ಯಕ್ಷಮತಾ ಬ್ಯೂರೋ;

*ದಿನಾಂಕ: 1-3-2002 ರಂದು ಜಾರಿಗೆ ಬಂದಿದೆ. ಎಸ್.ಓ 268(ಇ) ದಿನಾಂಕ: 01-03-2002.

(ಇ) "ಅಧ್ಯಕ್ಷ" ಎಂದರೆ ಆಡಳಿತ ಪರಿಷತ್ತಿನ ಅಧ್ಯಕ್ಷ;

(ಎಫ್) "ಹೆಸರಿಸಲಾದ ಏಜನ್ಸಿ" ಎಂದರೆ 15ನೇ ಪ್ರಕರಣದ (ಡಿ) ಖಂಡದ ಮೇರೆಗೆ ಹೆಸರಿಸಲಾದ ಯಾವುದೇ ಏಜನ್ಸಿ;

(ಜಿ) "ಹೆಸರಿಸಲಾದ ಬಳಕೆದಾರ" ಎಂದರೆ 14ನೇ ಪ್ರಕರಣದ (ಇ) ಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ಯಾರೇ ಬಳಕೆದಾರ;

(ಹೆಚ್) "ಇಂಧನಶಕ್ತಿ" ಎಂದರೆ ಅಗೆದು ತೆಗೆದ ಉರುವಲಿನಿಂದ, ಪರಮಾಣು ವಸ್ತುಗಳಿಂದ ಅಥವಾ ಸಾಮಗ್ರಿಗಳಿಂದ ಅಥವಾ ಜಲವಿದ್ಯುತ್ತಿನಿಂದ ಪಡೆದ ಯಾವುದೇ ರೂಪದ ಇಂಧನ ಮತ್ತು ಇದು ಜಾಲಕ್ಕೆ ಜೋಡಿಸಿದ ವಿದ್ಯುಚ್ಛಕ್ತಿಯನ್ನು ಅಥವಾ ನವೀಕರಿಸಬಹುದಾದ ಶಕ್ತಿ ಮೂಲಗಳಿಂದ ಉತ್ಪಾದಿಸಲಾದ ವಿದ್ಯುಚ್ಛಕ್ತಿಯನ್ನು ಅಥವಾ ಜೈವಿಕ ದ್ರವ್ಯರಾಶಿಯನ್ನು ಒಳಗೊಳ್ಳುತ್ತದೆ;

(ಐ) "ಇಂಧನಶಕ್ತಿ ಸಂಪರೀಕ್ಷೆ" ಎಂದರೆ ವೆಚ್ಚ ಪ್ರಯೋಜನ ವಿಶ್ಲೇಷಣೆಯಿಂದ ಕೂಡಿದ ಇಂಧನಶಕ್ತಿ ಕಾರ್ಯಕ್ಷಮತೆಯನ್ನು ಸುಧಾರಿಸುವುದಕ್ಕೆ ಶಿಫಾರಸ್ಸುಗಳ ಸಹಿತ ತಾಂತ್ರಿಕ ವರದಿಯನ್ನು ಸಲ್ಲಿಸುವುದೂ ಒಳಗೊಂಡಂತೆ ಇಂಧನಶಕ್ತಿ ಬಳಕೆಯ ಪರಿಶೀಲನೆ, ಮೇಲ್ವಿಚಾರಣೆ ಮತ್ತು ವಿಶ್ಲೇಷಣೆ; ಮತ್ತು ಇಂಧನ ಶಕ್ತಿ ಬಳಕೆಯನ್ನು ಕಡಿಮೆ ಮಾಡುವ ಒಂದು ಕ್ರಿಯಾ ಯೋಜನೆ;

(ಜೆ) "ಇಂಧನಶಕ್ತಿ ಸಂರಕ್ಷಣಾ ಕಟ್ಟಡ ಸಂಹಿತೆಗಳು" ಎಂದರೆ ಇಂಧನಶಕ್ತಿಯನ್ನು ಬಳಸುವ ಪ್ರದೇಶದ ಪ್ರತಿ ಚದರ ಮೀಟರಿನಲ್ಲಿ ವ್ಯಕ್ತಪಡಿಸಿದ ಇಂಧನಶಕ್ತಿ ಬಳಕೆಯ ಪ್ರಮಾಣಗಳು ಮತ್ತು ಮಾನಕಗಳು ಎಂದು ಅರ್ಥ ಹಾಗೂ ಅದು ಕಟ್ಟಡದ ಸ್ಥಳವನ್ನು ಒಳಗೊಳ್ಳುತ್ತದೆ;

(ಕೆ) "ಇಂಧನಶಕ್ತಿ ಬಳಕೆಯ ಮಾನಕಗಳು" ಎಂದರೆ 14ನೇ ಪ್ರಕರಣದ (ಎ) ಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ಪ್ರಕ್ರಿಯೆ ಮತ್ತು ಇಂಧನಶಕ್ತಿ ಬಳಕೆಯ ಮಾನಕಗಳ ಪ್ರಮಾಣ;

(ಎಲ್) "ಇಂಧನಶಕ್ತಿ ವ್ಯವಸ್ಥಾಪನಾ ಕೇಂದ್ರ" ಎಂದರೆ ಭಾರತ ಸರ್ಕಾರದ ಈ ಮುಂಚಿನ ಇಂಧನಶಕ್ತಿ ಮಂತ್ರಾಲಯದ, ವಿದ್ಯುತ್ ಇಲಾಖೆಯ ಸಂಖ್ಯೆ 7(2)/87 ಇಪಿ (ಸಂಪುಟ–IV), ದಿನಾಂಕ ಜುಲೈ 5, 1989ರ ಭಾರತ ಸರ್ಕಾರದ ನಿರ್ಣಯದ ಮೇರೆಗೆ ಸ್ಥಾಪಿತವಾದ ಮತ್ತು ಸೊಸೈಟಿಗಳ ನೋಂದಣಿ ಅಧಿನಿಯಮ, 1860ರ ಮೇರೆಗೆ ನೋಂದಾಯಿಸಲಾದ ಇಂಧನಶಕ್ತಿ ವ್ಯವಸ್ಥಾಪನಾ ಕೇಂದ್ರ;

(ಎಂ) "ಇಂಧನಶಕ್ತಿ ವ್ಯವಸ್ಥಾಪಕರು" ಎಂದರೆ 14ನೇ ಪ್ರಕರಣದ (ಎಂ) ಖಂಡದ ಮೇರೆಗೆ ನಿಗದಿಪಡಿಸಲಾದ ಅರ್ಹತೆಗಳನ್ನು ಹೊಂದಿರುವ ಯಾರೇ ವ್ಯಕ್ತಿ;

(ಎನ್) "ಆಡಳಿತ ಪರಿಷತ್ತು" ಎಂದರೆ 4ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಆಡಳಿತ ಪರಿಷತ್ತು;

(ಓ) "ಸದಸ್ಯ" ಎಂದರೆ ಆಡಳಿತ ಪರಿಷತ್ತಿನ ಸದಸ್ಯ ಎಂದು ಅರ್ಥ ಮತ್ತು ಅದು ಅಧ್ಯಕ್ಷನನ್ನು ಒಳಗೊಳ್ಳುತ್ತದೆ;

(ಪಿ) "ಅಧಿಸೂಚನೆ" ಎಂದರೆ ಭಾರತ ರಾಜಪತ್ರದ ಅಥವಾ ಸಂದರ್ಭಾನುಸಾರ ಒಂದು ರಾಜ್ಯದ ರಾಜಪತ್ರದ ಅಧಿಸೂಚನೆ;

(ಕ್ಯೂ) "ನಿಯಮಿಸಿದ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಆರ್) "ವಿನಿಯಮನಗಳು" ಎಂದರೆ ಈ ಅಧಿನಿಯಮದ ಮೇರೆಗೆ ಬ್ಯೂರೋ ರಚಿಸಿದ ವಿನಿಯಮನಗಳು;

(ಎಸ್) "ಅನುಸೂಚಿ" ಎಂದರೆ ಈ ಅಧಿನಿಯಮದ ಅನುಸೂಚಿ;

(ಟಿ) "ರಾಜ್ಯ ಆಯೋಗ" ಎಂದರೆ ವಿದ್ಯುಚ್ಛಕ್ತಿ ವಿನಿಯಾಮಕ ಆಯೋಗಗಳ ಅಧಿನಿಯಮ, 1998ರ (1998ರ 14) 17ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿತವಾದ ರಾಜ್ಯ ವಿದ್ಯುಚ್ಛಕ್ತಿ ವಿನಿಯಾಮಕ ಆಯೋಗ;

(ಯು) ಈ ಅಧಿನಿಯಮದಲ್ಲಿ ಉಪಯೋಗಿಸಿದ ಮತ್ತು ಪರಿಭಾಷಿಸಿರದ, ಆದರೆ ಭಾರತ ವಿದ್ಯುಚ್ಛಕ್ತಿ ಅಧಿನಿಯಮ, 1910 ರಲ್ಲಿ ಅಥವಾ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರಲ್ಲಿ ಅಥವಾ ವಿದ್ಯುಚ್ಛಕ್ತಿ ವಿನಿಯಾಮಕ ಆಯೋಗಗಳ ಅಧಿನಿಯಮ, 1998ರಲ್ಲಿ ಪರಿಭಾಷಿಸಿದ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ – II

## ಇಂಧನಶಕ್ತಿ ಕಾರ್ಯಕ್ಷಮತಾ ಬ್ಯೂರೋ

**3. ಇಂಧನಶಕ್ತಿ ಕಾರ್ಯಕ್ಷಮತಾ ಬ್ಯೂರೋದ ಸ್ಥಾಪನೆ ಮತ್ತು ನಿಗಮನ.**– (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿಯಮಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮದ ಉದ್ದೇಶಗಳಿಗಾಗಿ ಇಂಧನಶಕ್ತಿ ಕಾರ್ಯಕ್ಷಮತಾ ಬ್ಯೂರೊ ಎಂದು ಕರೆಯಲಾಗುವ ಒಂದು ಬ್ಯೂರೋವನ್ನು ಸ್ಥಾಪಿಸತಕ್ಕದ್ದು.

(2) ಬ್ಯೂರೋ ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು, ಅದು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿದ್ದು, ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸಲು, ಧಾರಣ ಮಾಡಲು ಮತ್ತು ವಿಲೆ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅದು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಬ್ಯೂರೋದ ಕೇಂದ್ರ ಕಚೇರಿಯು ದೆಹಲಿಯಲ್ಲಿರತಕ್ಕದ್ದು.

(4) ಬ್ಯೂರೋ ಭಾರತದ ಇತರ ಸ್ಥಳಗಳಲ್ಲಿ ಕಚೇರಿಗಳನ್ನು ಸ್ಥಾಪಿಸಬಹುದು.

**4. ಬ್ಯೂರೋದ ವ್ಯವಸ್ಥಾಪನೆ.**– (1) ಬ್ಯೂರೋದ ವ್ಯವಹಾರಗಳ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ವ್ಯವಸ್ಥಾಪನೆಯು ಆಡಳಿತ ಪರಿಷತ್ತಿನಲ್ಲಿ ನಿಹಿತವಾಗಿರತಕ್ಕದ್ದು, ಅದು ಕೇಂದ್ರ ಸರ್ಕಾರವು ನೇಮಕ ಮಾಡುವ ಇಪ್ಪತ್ತಕ್ಕಿಂತ ಕಡಿಮೆ ಇಲ್ಲದ ಆದರೆ ಇಪ್ಪತ್ತಾರಕ್ಕಿಂತ ಹೆಚ್ಚಲ್ಲದ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(2) ಆಡಳಿತ ಪರಿಷತ್ತು ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

| | | |
|---|---|---|
| (ಎ) ಕೇಂದ್ರ ಸರ್ಕಾರದ ವಿದ್ಯುತ್ತಿಗೆ ಸಂಬಂಧಿಸಿದ ಮಂತ್ರಾಲಯದ ಅಥವಾ ಇಲಾಖೆಯ ಪ್ರಭಾರದಲ್ಲಿರುವ ಸಚಿವರು | : | ಪದನಿಮಿತ್ತ ಅಧ್ಯಕ್ಷ |
| (ಬಿ) ಕೇಂದ್ರ ಸರ್ಕಾರದ ವಿದ್ಯುತ್ತಿಗೆ ಸಂಬಂಧಿಸಿದ ಮಂತ್ರಾಲಯದ ಅಥವಾ ಇಲಾಖೆಯ ಪ್ರಭಾರದಲ್ಲಿರುವ ಭಾರತ ಸರ್ಕಾರದ ಕಾರ್ಯದರ್ಶಿ | : | ಪದನಿಮಿತ್ತ ಸದಸ್ಯ |
| (ಸಿ) ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಕ್ಕೆ ಸಂಬಂಧಿಸಿದ ಮಂತ್ರಾಲಯದ ಅಥವಾ ಇಲಾಖೆಯ ಪ್ರಭಾರದಲ್ಲಿರುವ ಭಾರತ ಸರ್ಕಾರದ ಕಾರ್ಯದರ್ಶಿ | : | ಪದನಿಮಿತ್ತ ಸದಸ್ಯ |
| (ಡಿ) ಕೇಂದ್ರ ಸರ್ಕಾರದ ಕಲ್ಲಿದ್ದಲಿಗೆ ಸಂಬಂಧಿಸಿದ ಮಂತ್ರಾಲಯದ ಅಥವಾ ಇಲಾಖೆಯ ಪ್ರಭಾರದಲ್ಲಿರುವ ಭಾರತ ಸರ್ಕಾರದ ಕಾರ್ಯದರ್ಶಿ | : | ಪದನಿಮಿತ್ತ ಸದಸ್ಯ |
| (ಇ) ಕೇಂದ್ರ ಸರ್ಕಾರದ ಸಾಂಪ್ರದಾಯಿಕವಲ್ಲದ ಇಂಧನಶಕ್ತಿ ಮೂಲಗಳಿಗೆ ಸಂಬಂಧಿಸಿದ ಮಂತ್ರಾಲಯದ ಅಥವಾ ಇಲಾಖೆಯ ಪ್ರಭಾರದಲ್ಲಿರುವ ಭಾರತ ಸರ್ಕಾರದ ಕಾರ್ಯದರ್ಶಿ | : | ಪದನಿಮಿತ್ತ ಸದಸ್ಯ |
| (ಎಫ್) ಕೇಂದ್ರ ಸರ್ಕಾರದ ಪರಮಾಣು ಶಕ್ತಿಗೆ ಸಂಬಂಧಿಸಿದ ಮಂತ್ರಾಲಯದ ಅಥವಾ ಇಲಾಖೆಯ ಪ್ರಭಾರ ದಲ್ಲಿರುವ ಭಾರತ ಸರ್ಕಾರದ ಕಾರ್ಯದರ್ಶಿ | : | ಪದನಿಮಿತ್ತ ಸದಸ್ಯ |
| (ಜಿ) ಕೇಂದ್ರ ಸರ್ಕಾರದ ಗ್ರಾಹಕ ವ್ಯವಹಾರಗಳಿಗೆ ಸಂಬಂಧಿಸಿದ ಮಂತ್ರಾಲಯದ ಅಥವಾ ಇಲಾಖೆಯ ಪ್ರಭಾರದಲ್ಲಿರುವ ಭಾರತ ಸರ್ಕಾರದ ಕಾರ್ಯದರ್ಶಿ | : | ಪದನಿಮಿತ್ತ ಸದಸ್ಯ |
| (ಹೆಚ್) ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ, 1948ರ (1948ರ 54) ಮೇರೆಗೆ ಸ್ಥಾಪಿತವಾದ ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದ ಅಧ್ಯಕ್ಷ | : | ಪದನಿಮಿತ್ತ ಸದಸ್ಯ |
| (ಐ) ಕರ್ನಾಟಕ ಸೊಸೈಟಿಗಳ ಅಧಿನಿಯಮ, 1960ರ (1960ರ ಕರ್ನಾಟಕ ಅಧಿನಿಯಮ 17) ಮೇರೆಗೆ ನೋಂದಾಯಿಸಲಾದ ಕೇಂದ್ರ ವಿದ್ಯುತ್ ಸಂಶೋಧನಾ ಬ್ಯೂರೋ ಮಹಾನಿರ್ದೇಶಕ | : | ಪದನಿಮಿತ್ತ ಸದಸ್ಯ |
| (ಜೆ) ಸೊಸೈಟಿಗಳ ನೋಂದಣಿ ಅಧಿನಿಯಮ, 1860ರ (1860ರ XXI) ಮೇರೆಗೆ ನೋಂದಾಯಿಸಲಾದ ಸೊಸೈಟಿಯಾಗಿರುವ ಪೆಟ್ರೋಲಿಯಂ ಸಂರಕ್ಷಣಾ ಸಂಶೋಧನಾ ಬ್ಯೂರೋ ಕಾರ್ಯನಿರ್ವಾಹಕ ನಿರ್ದೇಶಕ | : | ಪದನಿಮಿತ್ತ ಸದಸ್ಯ |

| | | |
|---|---|---|
| (ಕೆ) ಕಂಪನಿಗಳ ಅಧಿನಿಯಮ, 1956ರ (1956ರ 1) ಮೇರೆಗೆ ನಿಗಮಿತ ಕಂಪನಿಯಾಗಿರುವ ಕೇಂದ್ರ ಗಣಿ ಯೋಜನೆ ಮತ್ತು ವಿನ್ಯಾಸ ಸಂಸ್ಥೆ ನಿಯಮಿತ – ಇದರ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ | : | ಪದನಿಮಿತ್ತ ಸದಸ್ಯ |
| (ಎಲ್) ಭಾರತೀಯ ಮಾನಕಗಳ ಸಂಸ್ಥೆ ಅಧಿನಿಯಮ, 1986ರ (1986ರ 63) ಮೇರೆಗೆ ಸ್ಥಾಪಿತವಾದ ಭಾರತದ ಮಾನಕಗಳ ಸಂಸ್ಥೆಯ ಮಹಾನಿರ್ದೇಶಕ | : | ಪದನಿಮಿತ್ತ ಸದಸ್ಯ |
| (ಎಂ) ನ್ಯಾಷನಲ್ ಟೆಸ್ಟ್ ಹೌಸ್‌ನ ಮಹಾನಿರ್ದೇಶಕ, ಸರಬರಾಜು ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆಗಳ ಮಂತ್ರಾಲಯ, ಕೋಲ್ಕತ್ತಾ | : | ಪದನಿಮಿತ್ತ ಸದಸ್ಯ |
| (ಎನ್) ಕಂಪನಿಗಳ ಅಧಿನಿಯಮ, 1956ರ (1956ರ 1) ಮೇರೆಗೆ ನಿಗಮಿತ ಕಂಪನಿಯಾಗಿರುವ ಭಾರತೀಯ ನವೀಕರಿಸಬಹುದಾದ ಇಂಧನಶಕ್ತಿ ಅಭಿವೃದ್ಧಿ ಏಜನ್ಸಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ | : | ಪದನಿಮಿತ್ತ ಸದಸ್ಯ |
| (ಓ) ಪ್ರತಿಯೊಂದು ವಿದ್ಯುತ್ ಪ್ರದೇಶಕ್ಕೆ ಒಬ್ಬರಂತೆ ಐದು ವಿದ್ಯುತ್ ಪ್ರದೇಶಗಳ ರಾಜ್ಯಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನೇಮಕ ಮಾಡಿದ ಸದಸ್ಯ | : | ಸದಸ್ಯರು |
| (ಪಿ) ಕೈಗಾರಿಕೆ, ಸಾಧನ ಸಾಮಗ್ರಿ ಮತ್ತು ಉಪಕರಣಗಳ ತಯಾರಕರು, ವಾಸ್ತುಶಿಲ್ಪಿಗಳು ಮತ್ತು ಗ್ರಾಹಕರನ್ನು ಪ್ರತಿನಿಧಿಸಲು ಸಮರ್ಥರೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವ ವ್ಯಕ್ತಿಗಳೊಳಗಿಂದ ನಿಯಮಿಸಬಹುದಾದಂತೆ, ನಾಲ್ವರು ವ್ಯಕ್ತಿಗಳನ್ನು ಮೀರದಂತೆ ಕೇಂದ್ರ ಸರ್ಕಾರವು ನೇಮಕ ಮಾಡುವ ಸದಸ್ಯರು | : | ಸದಸ್ಯರು |
| (ಕ್ಯೂ) ಆಡಳಿತ ಪರಿಷತ್ತು ಸದಸ್ಯರೆಂದು ನಾಮನಿರ್ದೇಶಿಸಬಹುದಾದ ಇಬ್ಬರಿಗಿಂತ ಹೆಚ್ಚಲ್ಲದ ಸದಸ್ಯರು | : | ಸದಸ್ಯರು |
| (ಆರ್) ಬ್ಯೂರೋದ ಮಹಾನಿರ್ದೇಶಕ | : | ಪದನಿಮಿತ್ತ ಸದಸ್ಯ–ಕಾರ್ಯದರ್ಶಿ. |

(3) ಆಡಳಿತ ಪರಿಷತ್ತು, ಬ್ಯೂರೋ ಚಲಾಯಿಸಬಹುದಾದ ಎಲ್ಲಾ ಅಧಿಕಾರಗಳನ್ನು ಚಲಾಯಿಸಬಹುದು ಹಾಗೂ ಮಾಡಬಹುದಾದ ಎಲ್ಲಾ ಕೃತ್ಯಗಳನ್ನು ಮತ್ತು ಕಾರ್ಯಗಳನ್ನು ಮಾಡಬಹುದು.

(4) (2)ನೇ ಉಪಪ್ರಕರಣದ (ಓ), (ಪಿ) ಮತ್ತು (ಕ್ಯೂ) ಖಂಡಗಳಲ್ಲಿ ಉಲ್ಲೇಖಿಸಲಾದ ಪ್ರತಿಯೊಬ್ಬ ಸದಸ್ಯನು, ಅವನು ತನ್ನ ಪದ ಸ್ವೀಕಾರ ಮಾಡಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(5) (2)ನೇ ಉಪಪ್ರಕರಣದ (ಓ), (ಪಿ) ಮತ್ತು (ಕ್ಯೂ) ಖಂಡಗಳಲ್ಲಿ ಉಲ್ಲೇಖಿಸಲಾದ ಸದಸ್ಯರುಗಳಿಗೆ ಸಂದಾಯ ಮಾಡುವ ಫೀಜು ಮತ್ತು ಭತ್ಯೆಗಳು ಮತ್ತು ಖಾಲಿ ಸ್ಥಾನಗಳನ್ನು ತುಂಬುವ ರೀತಿಯು ಮತ್ತು ಅವರ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

**5. ಆಡಳಿತ ಪರಿಷತ್ತಿನ ಸಭೆಗಳು.–** (1) ಆಡಳಿತ ಪರಿಷತ್ತು, ವಿನಿಯಮನಗಳಲ್ಲಿ ಉಪಬಂಧಿಸ ಬಹುದಾದಂಥ ಕಾಲದಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ (ಅಂಥ ಸಭೆಗಳಲ್ಲಿಯ ಕೋರಂನ್ನು ಒಳಗೊಂಡಂತೆ) ಕಾರ್ಯಕಲಾಪಗಳ ನಿರ್ವಹಣೆಗೆ ಸಂಬಂಧಿಸಿದಂತೆ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

(2) ಅಧ್ಯಕ್ಷನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು ಅಥವಾ ಯಾವುದೇ ಕಾರಣಕ್ಕಾಗಿ ಆಡಳಿತ ಪರಿಷತ್ತಿನ ಸಭೆಗಳಿಗೆ ಹಾಜರಾಗಲು ಅವನು ಅಸಮರ್ಥನಾದರೆ, ಸಭೆಗಳಲ್ಲಿ ಹಾಜರಿರುವ ಸದಸ್ಯರು ತಮ್ಮೊಳಗಿಂದ ಆಯ್ಕೆ ಮಾಡಿದ ಇತರ ಯಾರೇ ಸದಸ್ಯನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(3) ಆಡಳಿತ ಪರಿಷತ್ತಿನ ಯಾವುದೇ ಸಭೆಯ ಮುಂದೆ ಬರುವ ಎಲ್ಲಾ ಪ್ರಶ್ನೆಗಳನ್ನು ಹಾಜರಿದ್ದು ಮತ್ತು ಮತ ನೀಡುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು, ಮತ್ತು ಮತಗಳು ಸಮಾನವಾಗಿ ಬಂದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಗೈರುಹಾಜರಿಯಲ್ಲಿ, ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

**6. ಖಾಲಿಸ್ಥಾನ, ಇತ್ಯಾದಿಗಳಿಂದಾಗಿ ಬ್ಯೂರೊ, ಆಡಳಿತ ಪರಿಷತ್ತು ಅಥವಾ ಸಮಿತಿಯ ವ್ಯವಹರಣೆಗಳು ಅಸಿಂಧುವಾಗತಕ್ಕದ್ದಲ್ಲ.–** ಬ್ಯೂರೋ ಅಥವಾ ಆಡಳಿತ ಪರಿಷತ್ತು ಅಥವಾ ಯಾವುದೇ ಸಮಿತಿಯ ಕಾರ್ಯ ಅಥವಾ ವ್ಯವಹರಣೆಯು,–

(ಎ) ಬ್ಯೂರೋದಲ್ಲಿ ಅಥವಾ ಆಡಳಿತ ಪರಿಷತ್ತಿನಲ್ಲಿ ಅಥವಾ ಸಮಿತಿಯಲ್ಲಿ ಯಾವುದೇ ಖಾಲಿ ಸ್ಥಾನವಿದೆ ಅಥವಾ ಅವುಗಳ ರಚನೆಯಲ್ಲಿ ಯಾವುದೇ ದೋಷವಿದೆಯೆಂಬ; ಅಥವಾ

(ಬಿ) ಬ್ಯೂರೋದ ಮಹಾನಿರ್ದೇಶಕನಾಗಿ ಅಥವಾ ಕಾರ್ಯದರ್ಶಿಯಾಗಿ ಅಥವಾ ಆಡಳಿತ ಪರಿಷತ್ತಿನ ಅಥವಾ ಸಮಿತಿಯ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ನೇಮಕದಲ್ಲಿ ಯಾವುದೇ ದೋಷವಿದೆಯೆಂಬ; ಅಥವಾ

(ಸಿ) ಬ್ಯೂರೋದ ಅಥವಾ ಆಡಳಿತ ಪರಿಷತ್ತಿನ ಅಥವಾ ಸಮಿತಿಯ ಪ್ರಕ್ರಿಯೆಯಲ್ಲಿ ಪ್ರಕರಣದ ಗುಣಾವಗುಣಗಳಿಗೆ ಬಾಧೆಯುಂಟುಮಾಡದ ಯಾವುದೇ ಅಕ್ರಮತೆ ಇದೆಯೆಂಬ

– ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**7. ಸದಸ್ಯನನ್ನು ಪದದಿಂದ ತೆಗೆದುಹಾಕುವುದು.–** ಕೇಂದ್ರ ಸರ್ಕಾರವು, 4ನೇ ಪ್ರಕರಣದ (2)ನೇ ಉಪಪ್ರಕರಣದ (ಓ), (ಪಿ) ಮತ್ತು (ಕ್ಯೂ) ಖಂಡಗಳಲ್ಲಿ ಉಲ್ಲೇಖಿಸಿದ ಸದಸ್ಯನನ್ನು,–

(ಎ) ಅವನು ದಿವಾಳಿ ಎಂದು ನ್ಯಾಯನಿರ್ಣೀತನಾದರೆ ಅಥವಾ ಯಾವುದೇ ಸಮಯದಲ್ಲಿ ಹಾಗೆಂದು ನ್ಯಾಯನಿರ್ಣೀತನಾಗಿದ್ದರೆ;

(ಬಿ) ಅವನು ಅಸ್ವಸ್ಥ ಮನಸ್ಸಿನವನಾಗಿದ್ದು ಸಕ್ಷಮ ನ್ಯಾಯಾಲಯವು ಹಾಗೆಂದು ಘೋಷಿಸಿದ್ದರೆ;

(ಸಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಅವನು ನೈತಿಕ ಅಧಃಪತನವನ್ನೊಳಗೊಂಡ ಒಂದು ಅಪರಾಧದ ಅಪರಾಧಿ ಎಂದು ನಿರ್ಣೀತನಾಗಿದ್ದರೆ;

(ಡಿ) ಅವನು ತನ್ನ ಸ್ಥಾನವನ್ನು ಎಷ್ಟರಮಟ್ಟಿಗೆ ದುರುಪಯೋಗಪಡಿಸಿಕೊಂಡಿದ್ದಾನೆಂದರೆ ಅವನನ್ನು ಆ ಪದದಲ್ಲಿ ಮುಂದುವರೆಸುವುದರಿಂದ ಸಾರ್ವಜನಿಕ ಹಿತಾಸಕ್ತಿಗೆ ಹಾನಿಕಾರಕವಾಗುತ್ತದೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ

– ಪದದಿಂದ ತೆಗೆದುಹಾಕತಕ್ಕದ್ದು:

ಪರಂತು, ಆ ವಿಷಯದಲ್ಲಿ ತನ್ನ ಅಹವಾಲು ಹೇಳಿಕೊಳ್ಳಲು ಅವನಿಗೆ ಯುಕ್ತ ಅವಕಾಶವನ್ನು ನೀಡಿದ ಹೊರತು, ಈ ಅಧಿನಿಯಮದ ಮೇರೆಗೆ ಯಾರೇ ಸದಸ್ಯನನ್ನು ಪದದಿಂದ ತೆಗೆದುಹಾಕತಕ್ಕದ್ದಲ್ಲ.

**8. ಸಲಹಾ ಸಮಿತಿಗಳ ಮತ್ತು ಇತರ ಸಮಿತಿಗಳ ರಚನೆ.–** (1) ಈ ಸಂಬಂಧದಲ್ಲಿ ಮಾಡಿದ ಯಾವುವೇ ವಿನಿಯಮನಗಳಿಗೆ ಒಳಪಟ್ಟು, ಬ್ಯೂರೋ ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಆರು ತಿಂಗಳೊಳಗೆ ಅದರ ಪ್ರಕಾರ್ಯಗಳನ್ನು ಸಮರ್ಥವಾಗಿ ನೆರವೇರಿಸುವುದಕ್ಕಾಗಿ ಸಲಹಾ ಸಮಿತಿಗಳನ್ನು ರಚಿಸತಕ್ಕದ್ದು.

(2) ಪ್ರತಿಯೊಂದು ಸಲಹಾ ಸಮಿತಿಯು, ವಿನಿಯಮನಗಳು ನಿರ್ಧರಿಸಬಹುದಾದಂತೆ ಒಬ್ಬ ಅಧ್ಯಕ್ಷನನ್ನು ಮತ್ತು ಅಂಥ ಇತರ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಅಡಕವಾಗಿರುವ ಅಧಿಕಾರಗಳಿಗೆ ಪ್ರತಿಕೂಲ ಪರಿಣಾಮ ಉಂಟಾಗದಂತೆ, ಸಾಧನ ಸಾಮಗ್ರಿ ಅಥವಾ ಪ್ರಕ್ರಿಯೆಗಳ ಸಂದರ್ಭದಲ್ಲಿ ಇಂಧನಶಕ್ತಿ ಬಳಕೆಯ ಮಾನಕಗಳನ್ನು ಅಥವಾ ಪ್ರಮಾಣಗಳನ್ನು ರೂಪಿಸುವುದಕ್ಕಾಗಿ ಬ್ಯೂರೋ ಅವಶ್ಯವೆಂದು ಪರ್ಯಾಲೋಚಿಸುವಂಥ ಸಂಖ್ಯೆಯ ತಜ್ಞರ ತಾಂತ್ರಿಕ ಸಮಿತಿಗಳನ್ನು ರಚಿಸಬಹುದು.

**9. ಬ್ಯೂರೋದ ಮಹಾನಿರ್ದೇಶಕ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಇಂಧನಶಕ್ತಿ ಉತ್ಪಾದನೆ, ಸರಬರಾಜು ಮತ್ತು ಇಂಧನಶಕ್ತಿ ವ್ಯವಸ್ಥಾಪನೆ, ಪ್ರಮಾಣ ನಿಷ್ಕರ್ಷೆ ಮತ್ತು ಇಂಧನಶಕ್ತಿಯ ಸಮರ್ಥ ಬಳಕೆಗಾಗಿ ಮತ್ತು ಅದರ ಸಂರಕ್ಷಣೆಗೆ ಸಂಬಂಧಿಸಿದ ವಿಷಯಗಳ ಕುರಿತು ವ್ಯವಹರಿಸುವಲ್ಲಿ ಸಾಕಷ್ಟು ಜ್ಞಾನ ಮತ್ತು ಅನುಭವವನ್ನು ಹೊಂದಿರುವ, ಸಮರ್ಥ ಮತ್ತು ತಜ್ಞ ವ್ಯಕ್ತಿಗಳ ಪೈಕಿಯಿಂದ ಮಹಾನಿರ್ದೇಶಕನನ್ನು ನೇಮಕ ಮಾಡತಕ್ಕದ್ದು.

(2) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ, ಭಾರತ ಸರ್ಕಾರದ ಉಪಕಾರ್ಯದರ್ಶಿಯ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಯಾರೇ ವ್ಯಕ್ತಿಯನ್ನು ಬ್ಯೂರೋದ ಕಾರ್ಯದರ್ಶಿಯನ್ನಾಗಿ ನೇಮಕ ಮಾಡತಕ್ಕದ್ದು.

(3) ಮಹಾನಿರ್ದೇಶಕನು, ಅವನು ತನ್ನ ಪದಸ್ವೀಕಾರ ಮಾಡಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಥವಾ ಆತನಿಗೆ ಅರವತ್ತು ವರ್ಷ ವಯಸ್ಸು ತುಂಬುವವರೆಗೆ, ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದಧಾರಣ ಮಾಡತಕ್ಕದ್ದು.

(4) ಮಹಾನಿರ್ದೇಶಕನಿಗೆ ಸಂದಾಯಮಾಡುವ ಸಂಬಳ ಮತ್ತು ಭತ್ಯೆಗಳು ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಬ್ಯೂರೋದ ಕಾರ್ಯದರ್ಶಿಯ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(5) ಆಡಳಿತ ಪರಿಷತ್ತಿನ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ವ್ಯವಹಾರಗಳ ವ್ಯವಸ್ಥಾಪನೆಗೆ ಒಳಪಟ್ಟು, ಬ್ಯೂರೋದ ಮಹಾನಿರ್ದೇಶಕನು ಬ್ಯೂರೋದ ಮುಖ್ಯ ಕಾರ್ಯನಿರ್ವಾಹಕ ಪ್ರಾಧಿಕಾರಿಯಾಗಿರತಕ್ಕದ್ದು.

(6) ಬ್ಯೂರೋದ ಮಹಾನಿರ್ದೇಶಕನು, ವಿನಿಯಮನಗಳು ನಿರ್ಧರಿಸಬಹುದಾದಂತೆ ಬ್ಯೂರೋದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**10. ಬ್ಯೂರೋದ ಅಧಿಕಾರಿಗಳು ಮತ್ತು ನೌಕರರು.**– (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ಬ್ಯೂರೋದ ಪ್ರಕಾರ್ಯಗಳ ಸಮರ್ಥ ನೆರವೇರಿಕೆಗಾಗಿ ತಾನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ಬ್ಯೂರೋದಲ್ಲಿ ನೇಮಕ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ನೇಮಕವಾದ ಬ್ಯೂರೋದ ಅಂಥ ಅಧಿಕಾರಿಗಳು ಮತ್ತು ಇತರ ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**11. ಬ್ಯೂರೋದ ಆದೇಶಗಳ ಮತ್ತು ತೀರ್ಮಾನಗಳ ಅಧಿಪ್ರಮಾಣೀಕರಣ.**– ಬ್ಯೂರೋದ ಎಲ್ಲಾ ಆದೇಶಗಳನ್ನು ಮತ್ತು ತೀರ್ಮಾನಗಳನ್ನು ಮಹಾನಿರ್ದೇಶಕನ ಅಥವಾ ಮಹಾನಿರ್ದೇಶಕನು ಈ ಸಂಬಂಧದಲ್ಲಿ ಅಧಿಕೃತಗೊಳಿಸಿದ ಬ್ಯೂರೋದ ಯಾರೇ ಇತರ ಅಧಿಕಾರಿಯ ಸಹಿಯ ಮೂಲಕ ಅಧಿಪ್ರಮಾಣೀಕರಿಸತಕ್ಕದ್ದು.

## ಅಧ್ಯಾಯ – III

## ಬ್ಯೂರೋಗೆ ಇಂಧನಶಕ್ತಿ ವ್ಯವಸ್ಥಾಪನಾ ಕೇಂದ್ರದ ಆಸ್ತಿಗಳ, ಹೊಣೆಗಾರಿಕೆಗಳ, ಇತ್ಯಾದಿಗಳ ವರ್ಗಾವಣೆ

**12. ಇಂಧನಶಕ್ತಿ ವ್ಯವಸ್ಥಾಪನಾ ಕೇಂದ್ರದ ಆಸ್ತಿಗಳ, ಹೊಣೆಗಾರಿಕೆಗಳ ಮತ್ತು ನೌಕರರ ವರ್ಗಾವಣೆ, ಇತ್ಯಾದಿ.**– (1) ಬ್ಯೂರೋದ ಸ್ಥಾಪನೆಯ ದಿನಾಂಕದಂದು ಮತ್ತು ಅಂದಿನಿಂದ,–

(ಎ) ಈ ಅಧಿನಿಯಮವನ್ನು ಹೊರತುಪಡಿಸಿ, ಯಾವುದೇ ಕಾನೂನಿನಲ್ಲಿ ಅಥವಾ ಯಾವುದೇ ಕರಾರಿನಲ್ಲಿ ಅಥವಾ ಇತರ ಲಿಖಿತದಲ್ಲಿ ಇಂಧನಶಕ್ತಿ ವ್ಯವಸ್ಥಾಪನಾ ಕೇಂದ್ರಕ್ಕೆ ಮಾಡಿದ ಯಾವುದೇ ಉಲ್ಲೇಖವನ್ನು ಬ್ಯೂರೋಗೆ ಮಾಡಿದ ಉಲ್ಲೇಖವೆಂಬುದಾಗಿ ಭಾವಿಸತಕ್ಕದ್ದು;

(ಬಿ) ಇಂಧನಶಕ್ತಿ ವ್ಯವಸ್ಥಾಪನಾ ಕೇಂದ್ರದ ಅಥವಾ ಅದಕ್ಕೆ ಸೇರಿದ ಎಲ್ಲ ಚರ ಮತ್ತು ಸ್ಥಿರ ಸ್ವತ್ತುಗಳು ಮತ್ತು ಆಸ್ತಿಗಳು ಬ್ಯೂರೋದಲ್ಲಿ ನಿಹಿತವಾಗಿರತಕ್ಕದ್ದು;

(ಸಿ) ಇಂಧನಶಕ್ತಿ ವ್ಯವಸ್ಥಾಪನಾ ಕೇಂದ್ರದ ಎಲ್ಲಾ ಹಕ್ಕುಗಳನ್ನು ಮತ್ತು ಹೊಣೆಗಾರಿಕೆಗಳನ್ನು ಬ್ಯೂರೋಗೆ ವರ್ಗಾಯಿಸತಕ್ಕದ್ದು ಮತ್ತು ಅವುಗಳು ಬ್ಯೂರೋದ ಹಕ್ಕುಗಳಾಗಿ ಮತ್ತು ಹೊಣೆಗಾರಿಕೆಗಳಾಗಿ ಇರತಕ್ಕದ್ದು;

(ಡಿ) (ಸಿ) ಖಂಡದ ಉಪಬಂಧಗಳಿಗೆ ಪ್ರತಿಕೂಲ ಪರಿಣಾಮವಾಗದಂತೆ ಆ ದಿನಾಂಕದ ನಿಕಟಪೂರ್ವದಲ್ಲಿ ಇಂಧನಶಕ್ತಿ ವ್ಯವಸ್ಥಾಪನಾ ಕೇಂದ್ರವು, ಸದರಿ ಕೇಂದ್ರದ ಉದ್ದೇಶಗಳಿಗಾಗಿ ಅಥವಾ ಅವುಗಳ ಸಂಬಂಧದಲ್ಲಿ ವಹಿಸಿದ ಎಲ್ಲಾ ಋಣಗಳನ್ನು, ಬಾಧ್ಯತೆಗಳನ್ನು ಮತ್ತು ಹೊಣೆಗಾರಿಕೆಗಳನ್ನು, ಸದರಿ ಕೇಂದ್ರದೊಂದಿಗೆ ಅಥವಾ ಅದರ ಪರವಾಗಿ ಮಾಡಿಕೊಂಡ ಎಲ್ಲಾ ಕರಾರುಗಳನ್ನು ಮತ್ತು ಮಾಡಲು ತೊಡಗಬೇಕಾಗಿರುವ ಎಲ್ಲ ವಿಷಯಗಳನ್ನು ಮತ್ತು ಕಾರ್ಯಗಳನ್ನು ಬ್ಯೂರೋವು ವಹಿಸಿದೆಯೆಂದು ಅಥವಾ ಅದರೊಂದಿಗೆ ಮಾಡಿಕೊಳ್ಳಲಾಗಿದೆಯೆಂದು ಅಥವಾ ಮಾಡಲು ತೊಡಗಬೇಕಾದುದೆಂದು ಭಾವಿಸತಕ್ಕದ್ದು.

(ಇ) ಆ ದಿನಾಂಕದ ನಿಕಟಪೂರ್ವದಲ್ಲಿ ಇಂಧನಶಕ್ತಿ ವ್ಯವಸ್ಥಾಪನಾ ಕೇಂದ್ರಕ್ಕೆ ಬರಬೇಕಾದ ಎಲ್ಲ ಬಾಕಿ ಮೊತ್ತಗಳನ್ನು ಬ್ಯೂರೋಗೆ ಬರಬೇಕಾದ ಬಾಕಿ ಮೊತ್ತಗಳು ಎಂಬುದಾಗಿ ಭಾವಿಸತಕ್ಕದ್ದು.

(ಎಫ್) ಆ ದಿನಾಂಕದ ನಿಕಟಪೂರ್ವದಲ್ಲಿ ಇಂಧನಶಕ್ತಿ ವ್ಯವಸ್ಥಾಪನಾ ಕೇಂದ್ರವು ಅಥವಾ ಅದರ ವಿರುದ್ಧ ಹೂಡಿದ ಅಥವಾ ಹೂಡಬಹುದಾದ ಎಲ್ಲಾ ದಾವೆಗಳು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಬ್ಯೂರೋವು ಅಥವಾ ಅದರ ವಿರುದ್ಧ ಮುಂದುವರಿಸಬಹುದು ಅಥವಾ ಹೂಡಬಹುದು; ಮತ್ತು

(ಜಿ) ಆ ದಿನಾಂಕದ ನಿಕಟಪೂರ್ವದಲ್ಲಿ ಇಂಧನಶಕ್ತಿ ವ್ಯವಸ್ಥಾಪನಾ ಕೇಂದ್ರದಲ್ಲಿ ಯಾವುದೇ ಪದವನ್ನು ಹೊಂದಿದ್ದ ಪ್ರತಿಯೊಬ್ಬ ನೌಕರನು ಪರಿಶ್ರಮಧನ, ರಜೆ, ಭವಿಷ್ಯ ನಿಧಿ, ನಿವೃತ್ತಿ ಅಥವಾ ಇತರೆ ಸೇವಾಂತ ಪ್ರಯೋಜನಗಳ ಸಂಬಂಧದಲ್ಲಿ ಬ್ಯೂರೋವನ್ನು ಸ್ಥಾಪಿಸಿರದಿದ್ದರೆ, ಅಂಥ ಪದವನ್ನು ಅವನು ಯಾವ ರೀತಿ ಹೊಂದಿರುತ್ತಿದ್ದನೋ ಅದೇ ರೀತಿಯಲ್ಲಿ, ಅದೇ ಅವಧಿಗೆ ಮತ್ತು ಅವೇ ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಬ್ಯೂರೋದಲ್ಲಿ ಪದವನ್ನು ಹೊಂದಿರತಕ್ಕದ್ದು ಮತ್ತು ಅಂಥ ನೌಕರನು ಅಂಥ ಅವಧಿಯೊಳಗಾಗಿ ಬ್ಯೂರೋದ ನೌಕರನಾಗದಿರಲು ಆಯ್ಕೆ ಮಾಡಿಕೊಂಡರೆ ಆ ದಿನಾಂಕದಿಂದ ಆರು ತಿಂಗಳು ಸಮಾಪ್ತಿಯಾಗುವವರೆಗೆ ಬ್ಯೂರೋದ ನೌಕರನಾಗಿ ಪದವನ್ನು ಹೊಂದಿರುವುದು ಮುಂದುವರಿಯತಕ್ಕದ್ದು.

(2) ಕೈಗಾರಿಕಾ ವಿವಾದಗಳ ಅಧಿನಿಯಮ, 1947 ರಲ್ಲಿ (1947ರ 14) ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಪ್ರಕರಣದ ಮೇರೆಗೆ ಬ್ಯೂರೋ ತನ್ನ ನಿಯತ ಸೇವೆಯಲ್ಲಿ ಯಾರೇ ನೌಕರನನ್ನು ವಿಲೀನಗೊಳಿಸುವುದು ಆ ಅಧಿನಿಯಮದ ಅಥವಾ ಇತರ ಕಾನೂನಿನ ಮೇರೆಗೆ ಯಾವುದೇ ನಷ್ಟ ಪರಿಹಾರಕ್ಕೆ ಅವನನ್ನು ಹಕ್ಕುಳ್ಳವನನ್ನಾಗಿಸತಕ್ಕದ್ದಲ್ಲ ಮತ್ತು ಅಂಥ ಯಾವುದೇ ಕ್ಲೇಮನ್ನು ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರವು ಪುರಸ್ಕರಿಸತಕ್ಕದ್ದಲ್ಲ.

## ಅಧ್ಯಾಯ – IV

## ಬ್ಯೂರೋದ ಅಧಿಕಾರಗಳು ಮತ್ತು ಪ್ರಕಾರ್ಯಗಳು

**13. ಬ್ಯೂರೋದ ಅಧಿಕಾರಗಳು ಮತ್ತು ಪ್ರಕಾರ್ಯಗಳು.**– (1) ಬ್ಯೂರೋ ಹೆಸರಿಸಲಾದ ಬಳಕೆದಾರರೊಂದಿಗೆ, ಹೆಸರಿಸಲಾದ ಏಜನ್ಸಿಗಳೊಂದಿಗೆ ಮತ್ತು ಇತರ ಏಜನ್ಸಿಗಳೊಂದಿಗೆ ಪರಿಣಾಮಕಾರಿಯಾಗಿ ಸಮನ್ವಯ ಸಾಧಿಸತಕ್ಕದ್ದು ಮತ್ತು ಈ ಅಧಿನಿಯಮದಿಂದ ಅಥವಾ ಮೇರೆಗೆ ಅದಕ್ಕೆ ವಹಿಸಿದ ಪ್ರಕಾರ್ಯಗಳ ನೆರವೇರಿಕೆಯಲ್ಲಿ ಅಸ್ತಿತ್ವದಲ್ಲಿರುವ ಸಂಪನ್ಮೂಲಗಳು ಮತ್ತು ಮೂಲ ಸೌಕರ್ಯಗಳನ್ನು ಗುರುತಿಸತಕ್ಕದ್ದು ಮತ್ತು ಬಳಸತಕ್ಕದ್ದು.

(2) ಬ್ಯೂರೋ, ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ವಹಿಸಬಹುದಾದ ಅಂಥ ಪ್ರಕಾರ್ಯಗಳನ್ನು ನೆರವೇರಿಸಬಹುದು ಮತ್ತು ಅಂಥ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ವಿಶೇಷವಾಗಿ ಅಂಥ ಪ್ರಕಾರ್ಯಗಳು ಮತ್ತು ಅಧಿಕಾರಗಳು,–

(ಎ) 14ನೇ ಪ್ರಕರಣದ (ಎ) ಖಂಡದ ಮೇರೆಗೆ ಅಧಿಸೂಚಿಸಲು ಅಗತ್ಯಪಡಿಸಲಾದ ಪ್ರಕ್ರಿಯೆಗಳ ಮತ್ತು ಇಂಧನಶಕ್ತಿ ಬಳಕೆ ಮಾನಕಗಳ ಪ್ರಮಾಣಗಳನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ;

(ಬಿ) 14ನೇ ಪ್ರಕರಣದ (ಡಿ) ಖಂಡದ ಮೇರೆಗೆ ಸಾಧನ ಸಾಮಗ್ರಿಗಳ ಅಥವಾ ಉಪಕರಣಗಳ ಮೇಲೆ ಗುರುತಿನ ಚೀಟಿಯ ಮೇಲೆ ಪ್ರದರ್ಶಿಸಲು ಅಗತ್ಯಪಡಿಸಿರುವ ವಿವರಗಳನ್ನು ಮತ್ತು ಅವುಗಳನ್ನು ಪ್ರದರ್ಶಿಸುವ ರೀತಿಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ;

(ಸಿ) ಇಂಧನಶಕ್ತಿಯ ಯಾರೇ ಬಳಕೆದಾರನನ್ನು ಅಥವಾ ಬಳಕೆದಾರರ ವರ್ಗವನ್ನು 14ನೇ ಪ್ರಕರಣದ (ಇ) ಖಂಡದ ಮೇರೆಗೆ ಹೆಸರಿಸಲಾದ ಬಳಕೆದಾರನೆಂದು ಅಧಿಸೂಚಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವ;

(ಡಿ) 14ನೇ ಪ್ರಕರಣದ (ಪಿ) ಖಂಡದ ಮೇರೆಗೆ ಇಂಧನಶಕ್ತಿ ಸಂರಕ್ಷಣಾ ಕಟ್ಟಡ ಸಂಹಿತೆಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ನಿಯಮಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವ;

(ಇ) ಇಂಧನಶಕ್ತಿಯ ಸಮರ್ಥ ಬಳಕೆಯ ಮತ್ತು ಅದರ ಸಂರಕ್ಷಣೆಯ ಬಗ್ಗೆ ಅರಿವನ್ನು ಮೂಡಿಸಲು ಮತ್ತು ಮಾಹಿತಿಯನ್ನು ಪ್ರಸಾರ ಮಾಡಲು ಅವಶ್ಯಕವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವ;

(ಎಫ್) ಇಂಧನಶಕ್ತಿಯ ಸಮರ್ಥ ಬಳಕೆ ಮತ್ತು ಅದರ ಸಂರಕ್ಷಣೆಗಾಗಿ ಕಾರ್ಯತಂತ್ರಗಳಲ್ಲಿ ಸಿಬ್ಬಂದಿ ಮತ್ತು ತಜ್ಞರಿಗೆ ತರಬೇತಿಯನ್ನು ಏರ್ಪಾಟು ಮಾಡುವ ಮತ್ತು ಸಂಘಟಿಸುವ;

(ಜಿ) ಇಂಧನಶಕ್ತಿ ಸಂರಕ್ಷಣೆಯ ಕ್ಷೇತ್ರದಲ್ಲಿ ಸಲಹಾ ಸೇವೆಗಳನ್ನು ಬಲಪಡಿಸುವ;

(ಹೆಚ್) ಇಂಧನಶಕ್ತಿ ಸಂರಕ್ಷಣೆಯ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಉತ್ತೇಜಿಸುವ;

(ಐ) ಉಪಕರಣದ ಮತ್ತು ಸಾಧನ ಸಾಮಗ್ರಿಗಳ ಇಂಧನಶಕ್ತಿಯ ಬಳಕೆಗಾಗಿ ಪ್ರಮಾಣೀಕರಿಸುವುದಕ್ಕಾಗಿ ಮತ್ತು ಪರೀಕ್ಷಿಸುವುದಕ್ಕಾಗಿ ಪರೀಕ್ಷಾ ಮತ್ತು ಪ್ರಮಾಣೀಕರಣ ಪ್ರಕ್ರಿಯೆಯನ್ನು ಅಭಿವೃದ್ಧಿಪಡಿಸುವ ಮತ್ತು ಪರೀಕ್ಷಿಸುವ ಸೌಲಭ್ಯಗಳನ್ನು ಹೆಚ್ಚಿಸುವ;

(ಜೆ) ಇಂಧನಶಕ್ತಿಯ ಸಮರ್ಥ ಬಳಕೆಯ ಮತ್ತು ಅದರ ಸಂರಕ್ಷಣೆಯನ್ನು ಉತ್ತೇಜಿಸುವುದಕ್ಕಾಗಿ ಪ್ರಾಯೋಗಿಕ ಯೋಜನೆಗಳ ಮತ್ತು ಪ್ರಾತ್ಯಕ್ಷಿಕೆ ಯೋಜನೆಗಳ ಅನುಷ್ಠಾನವನ್ನು ರೂಪಿಸುವ ಮತ್ತು ಅವುಗಳಿಗೆ ಅನುಕೂಲ ಕಲ್ಪಿಸುವ;

(ಕೆ) ಇಂಧನಶಕ್ತಿಯ ಸಮರ್ಥ ಬಳಕೆ ಪ್ರಕ್ರಿಯೆಗಳ, ಸಾಧನ ಸಾಮಗ್ರಿಗಳ, ಉಪಕರಣಗಳ ಮತ್ತು ಪದ್ಧತಿಗಳ ಬಳಕೆಯನ್ನು ಉತ್ತೇಜಿಸುವ;

(ಎಲ್) ಇಂಧನ ಶಕ್ತಿ ಕ್ಷಮತೆಯ ಬಳಕೆ ಯೋಜನೆಗಳಿಗೆ ನವೀನ ರೀತಿಯ ಹಣಕಾಸು ನೆರವನ್ನು ನೀಡುವುದಕ್ಕೆ ಉತ್ತೇಜಿಸುವ;

(ಎಂ) ಇಂಧನಶಕ್ತಿಯ ಸಮರ್ಥ ಬಳಕೆಯನ್ನು ಮತ್ತು ಅದರ ಸಂರಕ್ಷಣೆಯನ್ನು ಉತ್ತೇಜಿಸುವುದಕ್ಕಾಗಿ ಸಂಸ್ಥೆಗಳಿಗೆ ಹಣಕಾಸು ನೆರವನ್ನು ನೀಡುವ;

(ಎನ್) ಇಂಧನಶಕ್ತಿಯ ಸಮರ್ಥ ಬಳಕೆಯನ್ನು ಮತ್ತು ಅದರ ಸಂರಕ್ಷಣೆಯನ್ನು ಉತ್ತೇಜಿಸುವುದಕ್ಕಾಗಿ ಒದಗಿಸಲಾದ ಸೇವೆಗಳಿಗೆ ವಿನಿಯಮನಗಳು ನಿರ್ಧರಿಸಬಹುದಾದಂತೆ ಫೀಜನ್ನು ವಿಧಿಸುವ;

(ಓ) ವಿನಿಯಮನಗಳು ನಿರ್ದಿಷ್ಟಪಡಿಸಬಹುದಾದಂತೆ ಅಂಗೀಕೃತ ಇಂಧನಶಕ್ತಿ ಸಂಪರೀಕ್ಷಕರ ಪಟ್ಟಿಯನ್ನು ನಿರ್ವಹಿಸುವ;

(ಪಿ) ಅಂಗೀಕೃತ ಇಂಧನಶಕ್ತಿ ಸಂಪರೀಕ್ಷಕರ ಅರ್ಹತೆಗಳನ್ನು ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸುವ;

(ಕ್ಯೂ) ಇಂಧನಶಕ್ತಿಯ ಸಂಪರೀಕ್ಷೆಯನ್ನು ಯಾವ ರೀತಿಯಲ್ಲಿ ಮತ್ತು ಯಾವ ಮಧ್ಯಂತರ ಸಮಯದಲ್ಲಿ ನಡೆಸತಕ್ಕದ್ದೆಂದು ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸುವ;

(ಆರ್) ಹೆಸರಿಸಲಾದ ಬಳಕೆದಾರರು ನಿಯೋಜಿಸುವ ಅಥವಾ ನೇಮಕ ಮಾಡುವ ಇಂಧನಶಕ್ತಿ ವ್ಯವಸ್ಥಾಪಕರಿಗಾಗಿ ಅಧಿಪ್ರಮಾಣೀಕರಿಸುವ ಪ್ರಕ್ರಿಯೆಗಳನ್ನು ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸುವ;

(ಎಸ್) ಶೈಕ್ಷಣಿಕ ಸಂಸ್ಥೆಗಳು, ಮಂಡಲಿಗಳು, ವಿಶ್ವವಿದ್ಯಾಲಯಗಳು ಅಥವಾ ಸ್ವಾಯತ್ತ ನಿಕಾಯಗಳಿಗೆ ಇಂಧನಶಕ್ತಿಯ ಸಮರ್ಥ ಬಳಕೆ ಮತ್ತು ಅದರ ಸಂರಕ್ಷಣೆಗೆ ಸಂಬಂಧಿಸಿದಂತೆ ಶೈಕ್ಷಣಿಕ ಪಠ್ಯ ವಿಷಯವನ್ನು ತಯಾರುಮಾಡುವ ಮತ್ತು ಅವುಗಳ ಪಠ್ಯಕ್ರಮದಲ್ಲಿ ಅಂಥ ಪಠ್ಯ ವಿಷಯವನ್ನು ಸೇರಿಸಲು ಅವುಗಳೊಂದಿಗೆ ಸಮನ್ವಯ ಸಾಧಿಸುವ;

(ಟಿ) ಕೇಂದ್ರ ಸರ್ಕಾರವು ಅದಕ್ಕೆ ವಹಿಸಬಹುದಾದಂತೆ ಇಂಧನಶಕ್ತಿಯನ್ನು ಸಮರ್ಥವಾಗಿ ಬಳಸುವ ಮತ್ತು ಅದರ ಸಂರಕ್ಷಣೆಯ ಸಂಬಂಧದಲ್ಲಿ ಅಂತರ ರಾಷ್ಟ್ರೀಯ ಸಹಕಾರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ;

(ಯು) ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವ

– ಪ್ರಕಾರ್ಯವನ್ನು ಮತ್ತು ಅಧಿಕಾರವನ್ನು ಒಳಗೊಳ್ಳುತ್ತದೆ.

## ಅಧ್ಯಾಯ – V
## ಇಂಧನಶಕ್ತಿಯ ಸಮರ್ಥ ಬಳಕೆಗೆ ಮತ್ತು ಅದರ ಸಂರಕ್ಷಣೆಗೆ ಅನುಕೂಲ ಕಲ್ಪಿಸುವ ಮತ್ತು ಅದನ್ನು ಜಾರಿಗೊಳಿಸುವ ಕೇಂದ್ರ ಸರ್ಕಾರದ ಅಧಿಕಾರ

**14. ಇಂಧನಶಕ್ತಿಯ ಸಮರ್ಥ ಬಳಕೆಗೆ ಮತ್ತು ಅದರ ಸಂರಕ್ಷಣೆಗೆ ಅನುಕೂಲ ಕಲ್ಪಿಸಲು ಮತ್ತು ಜಾರಿಗೊಳಿಸಲು ಕೇಂದ್ರ ಸರ್ಕಾರದ ಅಧಿಕಾರ.**– ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಬ್ಯೂರೋದೊಡನೆ ಸಮಾಲೋಚನೆ ನಡೆಸಿ,–

(ಎ) ಇಂಧನಶಕ್ತಿಯನ್ನು ಬಳಸುವ, ಉತ್ಪಾದಿಸುವ, ರವಾನಿಸುವ ಅಥವಾ ಸರಬರಾಜು ಮಾಡುವ ಯಾವುದೇ ಉಪಕರಣಕ್ಕಾಗಿ, ಸಾಧನ ಸಾಮಗ್ರಿಗಾಗಿ, ಪ್ರಕ್ರಿಯೆಗಳ ಮತ್ತು ಇಂಧನಶಕ್ತಿ ಬಳಕೆಯ ಮಾನಕಗಳ ಪ್ರಮಾಣವನ್ನು ನಿರ್ದಿಷ್ಟಪಡಿಸಬಹುದು;

(ಬಿ) ಈ ಅಧಿನಿಯಮದ ಉದ್ದೇಶಗಳಿಗಾಗಿ ಉಪಕರಣಗಳ ಅಥವಾ ಸಾಧನ ಸಾಮಗ್ರಿಗಳ ಅಥವಾ ಸಂದರ್ಭಾನುಸಾರ ಉಪಕರಣಗಳ ಅಥವಾ ಸಾಧನ ಸಾಮಗ್ರಿಗಳ ವರ್ಗಗಳನ್ನು ನಿರ್ದಿಷ್ಟಪಡಿಸಬಹುದು;

(ಸಿ) (ಬಿ) ಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ಉಪಕರಣ ಅಥವಾ ಸಾಧನ ಸಾಮಗ್ರಿಯ ತಯಾರಿಕೆ ಅಥವಾ ಮಾರಾಟ ಅಥವಾ ಖರೀದಿ ಅಥವಾ ಆಮದನ್ನು, ಇಂಧನಶಕ್ತಿ ಬಳಕೆ ಮಾನಕಗಳಿಗೆ ಅಂಥ ಸಾಧನ ಸಾಮಗ್ರಿ ಅಥವಾ ಉಪಕರಣವು ಅನುರೂಪವಾಗಿರುವ ಹೊರತು, ನಿಷೇಧಿಸಬಹುದು:

ಪರಂತು, ಉಪಕರಣದ ಅಥವಾ ಸಾಧನ ಸಾಮಗ್ರಿಯ ತಯಾರಿಕೆ ಅಥವಾ ಮಾರಾಟ ಅಥವಾ ಖರೀದಿ ಅಥವಾ ಆಮದನ್ನು ನಿಷೇಧಿಸುವ ಯಾವುದೇ ಅಧಿಸೂಚನೆಯನ್ನು ಈ ಪ್ರಕರಣದ (ಎ) ಖಂಡದ ಮೇರೆಗೆ ಹೊರಡಿಸಿದ ಅಧಿಸೂಚನೆಯ ದಿನಾಂಕದಿಂದ ಎರಡು ವರ್ಷಗಳ ಒಳಗೆ ಹೊರಡಿಸತಕ್ಕದ್ದಲ್ಲ;

(ಡಿ) (ಬಿ) ಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ಮತ್ತು ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಅಂಥ ವಿವರಗಳನ್ನು ಉಪಕರಣದ ಅಥವಾ ಸಾಧನ ಸಾಮಗ್ರಿಯ ಮೇಲೆ ಗುರುತಿನ ಚೀಟಿಯಲ್ಲಿ ಪ್ರದರ್ಶಿಸುವಂತೆ ನಿರ್ದೇಶಿಸಬಹುದು;

(ಇ) ಬಳಸಿದ ಇಂಧನಶಕ್ತಿಯ ತೀವ್ರತೆ ಅಥವಾ ಪ್ರಮಾಣ ಹಾಗೂ ಇಂಧನಶಕ್ತಿಯ ಸಮರ್ಥ ಬಳಕೆ ಉಪಪ್ರಕರಣಗಳ ವ್ಯವಸ್ಥೆಗೆ ಬದಲಾಗಲು ಅಗತ್ಯವಿರುವ ಹೂಡಿಕೆಯ ಮೊಬಲಗು ಮತ್ತು ಅದರಲ್ಲಿ ಹಣ ಹೂಡಲು ಕೈಗಾರಿಕೆಯ ಸಾಮರ್ಥ್ಯ ಮತ್ತು ಕೈಗಾರಿಕೆಗೆ ಅಗತ್ಯವಿರುವ ಇಂಧನಶಕ್ತಿಯ ಸಮರ್ಥ ಬಳಕೆ ಯಂತ್ರದ ಮತ್ತು ಉಪಕರಣದ ಲಭ್ಯತೆ – ಇವುಗಳನ್ನು ಗಮನದಲ್ಲಿಟ್ಟು ಈ ಅಧಿನಿಯಮದ ಉದ್ದೇಶಗಳಿಗಾಗಿ ಇಂಧನಶಕ್ತಿಯ ಯಾರೇ ಬಳಕೆದಾರನನ್ನು ಅಥವಾ ಬಳಕೆದಾರರ ವರ್ಗವನ್ನು ಹೆಸರಿಸಿದ ಬಳಕೆದಾರರೆಂದು ನಿರ್ದಿಷ್ಟಪಡಿಸಬಹುದು;

(ಎಫ್) ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧಿಕ ಇಂಧನಶಕ್ತಿ ಬಳಸುವ ಕೈಗಾರಿಕೆಗಳ ಪಟ್ಟಿಯನ್ನು ಮಾರ್ಪಡಿಸಬಹುದು;

(ಜಿ) ಹೆಸರಿಸಲಾದ ಬಳಕೆದಾರರಿಗೆ ಅದು ಅವಶ್ಯವೆಂದು ಪರಿಗಣಿಸಬಹುದಾದಂತೆ ಅಂಥ ಇಂಧನಶಕ್ತಿ ಬಳಕೆಯ ಪ್ರಮಾಣಗಳನ್ನು ಮತ್ತು ಮಾನಕಗಳನ್ನು ವ್ಯವಸ್ಥೆಗೊಳಿಸಬಹುದು ಮತ್ತು ನಿಯಮಿಸಬಹುದು:

ಪರಂತು ಕೇಂದ್ರ ಸರ್ಕಾರವು, ನಿಯಮಿಸಬಹುದಾದಂಥ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಹೆಸರಿಸಲಾದ ಬೇರೆ ಬೇರೆ ಬಳಕೆದಾರರಿಗೆ ಬೇರೆಬೇರೆ ಪ್ರಮಾಣಗಳನ್ನು ಮತ್ತು ಮಾನಕಗಳನ್ನು ನಿಯಮಿಸಬಹುದು;

(ಹೆಚ್) ಬಳಸಿದ ಇಂಧನಶಕ್ತಿಯ ಪ್ರಮಾಣವನ್ನು ಅಥವಾ (ಎ) ಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ಇಂಧನಶಕ್ತಿ ಬಳಕೆಯ ಪ್ರಮಾಣಗಳನ್ನು ಮತ್ತು ಮಾನಕಗಳನ್ನು ಗಮನದಲ್ಲಿಟ್ಟುಕೊಂಡು ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಮಧ್ಯಂತರ ಕಾಲದಲ್ಲಿ ಅಂಗೀಕೃತ ಇಂಧನಶಕ್ತಿ ಸಂಪರೀಕ್ಷಕನಿಂದ ಇಂಧನಶಕ್ತಿ ಸಂಪರೀಕ್ಷೆಯನ್ನು ಮಾಡಿಸುವಂತೆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಧಿಕ ಇಂಧನಶಕ್ತಿ ಬಳಸುವ ಕೈಗಾರಿಕೆಗಳಿಗೆ ನಿರ್ದೇಶಿಸಬಹುದು;

(ಐ) ಇಂಧನಶಕ್ತಿಯ ಸಮರ್ಥ ಬಳಕೆಗಾಗಿ ಮತ್ತು ಅದರ ಸಂರಕ್ಷಣೆಗಾಗಿ ಅವಶ್ಯವೆಂದು ಪರ್ಯಾಲೋಚಿಸಿದರೆ, ಅಂಗೀಕೃತ ಇಂಧನಶಕ್ತಿ ಸಂಪರೀಕ್ಷಕನಿಂದ ಇಂಧನಶಕ್ತಿ ಸಂಪರೀಕ್ಷೆಯನ್ನು ಮಾಡಿಸುವಂತೆ ಯಾರೇ ಹೆಸರಿಸಿದ ಬಳಕೆದಾರನಿಗೆ ನಿರ್ದೇಶಿಸಬಹುದು;

(ಜೆ) 17ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪರಿಶೀಲನೆಯ ಉದ್ದೇಶಗಳಿಗಾಗಿ ಸೇರಿಸತಕ್ಕ ವಿಷಯಗಳನ್ನು ನಿರ್ದಿಷ್ಟಪಡಿಸಬಹುದು;

(ಕೆ) ಬಳಸಿದ ಇಂಧನಶಕ್ತಿ ಮತ್ತು ಅಂಗೀಕೃತ ಇಂಧನಶಕ್ತಿ ಸಂಪರೀಕ್ಷಕನ ಶಿಫಾರಸ್ಸಿನ ಮೇಲೆ ಕೈಗೊಂಡ ಕ್ರಮದ ಸಂಬಂಧದಲ್ಲಿಯ ಮಾಹಿತಿಯನ್ನು, ನಿಯಮಿಸಬಹುದಾದಂಥ ನಮೂನೆ ಮತ್ತು

ರೀತಿಯಲ್ಲಿ ಹಾಗೂ ಅಂಥ ಅವಧಿಯೊಳಗೆ ಹೆಸರಿಸಲಾದ ಏಜನ್ಸಿಗೆ ಒದಗಿಸುವಂತೆ ಯಾರೇ ಹೆಸರಿಸಿದ ಬಳಕೆದಾರನಿಗೆ ನಿರ್ದೇಶಿಸಬಹುದು;

(ಎಲ್) ಇಂಧನಶಕ್ತಿಯ ಸಮರ್ಥ ಬಳಕೆಗೆ ಮತ್ತು ಅದರ ಸಂರಕ್ಷಣೆಗೆ ಸಂಬಂಧಿಸಿದ ಚಟುವಟಿಕೆಗಳ ಪ್ರಭಾರದಲ್ಲಿರಲು ಇಂಧನಶಕ್ತಿ ವ್ಯವಸ್ಥಾಪಕನನ್ನು ಹೆಸರಿಸುವಂತೆ ಅಥವಾ ನೇಮಕ ಮಾಡುವಂತೆ ಮತ್ತು ಹೆಸರಿಸಲಾದ ಏಜನ್ಸಿಗೆ ಪ್ರತಿಯೊಂದು ಹಣಕಾಸು ವರ್ಷದ ಕೊನೆಯಲ್ಲಿ ಇಂಧನಶಕ್ತಿ ಬಳಕೆಯ ಸ್ಥಿತಿಗತಿಯ ಬಗ್ಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಒಂದು ವರದಿಯನ್ನು ಸಲ್ಲಿಸುವಂತೆ ಯಾರೇ ಹೆಸರಿಸಿದ ಬಳಕೆದಾರನಿಗೆ ನಿರ್ದೇಶಿಸಬಹುದು;

(ಎಂ) (ಎಲ್) ಖಂಡದ ಮೇರೆಗೆ ಹೆಸರಿಸಲಾಗುವ ಅಥವಾ ನೇಮಕವಾಗುವ ಇಂಧನಶಕ್ತಿ ವ್ಯವಸ್ಥಾಪಕರಿಗಾಗಿ ಕನಿಷ್ಠ ಅರ್ಹತೆಯನ್ನು ನಿಯಮಿಸಬಹುದು;

(ಎನ್) ಇಂಧನಶಕ್ತಿ ಬಳಕೆಯ ಪ್ರಮಾಣಗಳನ್ನು ಮತ್ತು ಮಾನಕಗಳನ್ನು ಪಾಲಿಸಲು ಪ್ರತಿಯೊಬ್ಬ ಹೆಸರಿಸಿದ ಬಳಕೆದಾರನಿಗೆ ನಿರ್ದೇಶಿಸಬಹುದು;

(ಓ) (ಜಿ) ಖಂಡದ ಮೇರೆಗೆ ನಿಯಮಿಸಿದ ಇಂಧನಶಕ್ತಿ ಬಳಕೆ ಪ್ರಮಾಣಗಳನ್ನು ಮತ್ತು ಮಾನಕಗಳನ್ನು ಪೂರೈಸದ ಯಾರೇ ಹೆಸರಿಸಿದ ಬಳಕೆದಾರನಿಗೆ ಇಂಧನಶಕ್ತಿಯ ಸಮರ್ಥ ಬಳಕೆಗಾಗಿ ಮತ್ತು ಅದರ ಸಂರಕ್ಷಣೆಗಾಗಿ ಒಂದು ಯೋಜನೆಯನ್ನು ತಯಾರಿಸುವಂತೆ ಮತ್ತು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಹಣ ಹೂಡಿಕೆಯ ಆರ್ಥಿಕ ಸಾಮರ್ಥ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಅಂಥ ಯೋಜನೆಗಳನ್ನು ಅನುಷ್ಠಾನಗೊಳಿಸುವಂತೆ ನಿರ್ದೇಶಿಸಬಹುದು;

(ಪಿ) ಕಟ್ಟಡ ಅಥವಾ ಕಟ್ಟಡ ಸಂಕೀರ್ಣಗಳಲ್ಲಿ ಇಂಧನಶಕ್ತಿಯ ಸಮರ್ಥ ಬಳಕೆ ಮತ್ತು ಅದರ ಸಂರಕ್ಷಣೆಗಾಗಿ ಇಂಧನಶಕ್ತಿ ಸಂರಕ್ಷಣಾ ಕಟ್ಟಡ ಸಂಹಿತೆಗಳನ್ನು ನಿಯಮಿಸಬಹುದು;

(ಕ್ಯೂ) ಇಂಧನಶಕ್ತಿ ಸಂರಕ್ಷಣಾ ಕಟ್ಟಡ ಸಂಹಿತೆಗಳನ್ನು ಪ್ರಾದೇಶಿಕ ಮತ್ತು ಸ್ಥಳೀಯ ಹವಾಮಾನದ ಸ್ಥಿತಿಗಳಿಗೆ ಹೊಂದುವಂತೆ ತಿದ್ದುಪಡಿ ಮಾಡಬಹುದು;

(ಆರ್) ಹೆಸರಿಸಿದ ಬಳಕೆದಾರನಾಗಿ ಕಟ್ಟಡ ಅಥವಾ ಕಟ್ಟಡ ಸಂಕೀರ್ಣಗಳ ಪ್ರತಿಯೊಬ್ಬ ಒಡೆಯನನ್ನು ಅಥವಾ ಅಧಿಭೋಗದಾರನನ್ನು, ಇಂಧನಶಕ್ತಿಯ ಸಮರ್ಥ ಬಳಕೆ ಮತ್ತು ಅದರ ಸಂರಕ್ಷಣೆಗಾಗಿ ಇಂಧನಶಕ್ತಿ ಸಂರಕ್ಷಣಾ ಕಟ್ಟಡ ಸಂಹಿತೆಗಳ ಉಪಬಂಧಗಳನ್ನು ಪಾಲಿಸುವಂತೆ ನಿರ್ದೇಶಿಸಬಹುದು;

(ಎಸ್) (ಆರ್) ಖಂಡದಲ್ಲಿ ಉಲ್ಲೇಖಿಸಿದ ಹೆಸರಿಸಲಾದ ಯಾರೇ ಬಳಕೆದಾರನಿಗೆ, ಅವನ ಕಟ್ಟಡದಲ್ಲಿ ಇಂಧನಶಕ್ತಿಯ ಸಮರ್ಥ ಉಪಯೋಗ ಮತ್ತು ಅದರ ಸಂರಕ್ಷಣೆಗಾಗಿ ಅವಶ್ಯಕವೆಂದು ಪರ್ಯಾಲೋಚಿಸಿದಲ್ಲಿ, ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಮಧ್ಯಂತರ ಕಾಲಗಳಲ್ಲಿ ಅಂಗೀಕೃತ ಇಂಧನಶಕ್ತಿ ಸಂಪರೀಕ್ಷಕನಿಂದ ಅಂಥ ಕಟ್ಟಡದ ಸಂಬಂಧದಲ್ಲಿ ಇಂಧನಶಕ್ತಿ ಸಂಪರೀಕ್ಷೆಯನ್ನು ಮಾಡಿಸುವಂತೆ ನಿರ್ದೇಶಿಸಬಹುದು;

(ಟಿ) ಇಂಧನಶಕ್ತಿಯ ಸಮರ್ಥ ಬಳಕೆಗೆ ಮತ್ತು ಅದರ ಸಂರಕ್ಷಣೆಗೆ ಸಂಬಂಧಿಸಿದಂತೆ ಅರಿವನ್ನು ಮೂಡಿಸಲು ಮತ್ತು ಮಾಹಿತಿಯನ್ನು ಪ್ರಸಾರ ಮಾಡಲು ಅವಶ್ಯಕವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬಹುದು;

(ಯು) ಇಂಧನಶಕ್ತಿಯ ಸಮರ್ಥ ಬಳಕೆ ಮತ್ತು ಅದರ ಸಂರಕ್ಷಣೆಗಾಗಿ ಸಿಬ್ಬಂದಿ ಮತ್ತು ತಜ್ಞರಿಗೆ ಕಾರ್ಯತಂತ್ರದಲ್ಲಿ ತರಬೇತಿಯನ್ನು ಏರ್ಪಡಿಸಬಹುದು ಮತ್ತು ಸಂಘಟಿಸಬಹುದು;

(ವಿ) ಸಮರ್ಥ ಇಂಧನ ಶಕ್ತಿ ಉಪಕರಣಗಳ ಅಥವಾ ಸಾಧನ ಸಾಮಗ್ರಿಗಳ ಬಳಕೆಯನ್ನು ಆದ್ಯತೆಯ ಮೇಲೆ ಮಾಡುವಂತೆ ಉತ್ತೇಜಿಸಲು ಕ್ರಮಗಳನ್ನು ತೆಗೆದುಕೊಳ್ಳಬಹುದು:

ಪರಂತು (ಪಿ)ಯಿಂದ (ಎಸ್) ವರೆಗಿನ ಖಂಡಗಳ ಮೇರೆಗಿನ ಅಧಿಕಾರಗಳನ್ನು ಸಂಬಂಧಪಟ್ಟ ರಾಜ್ಯದೊಂದಿಗೆ ಸಮಾಲೋಚಿಸಿ ಚಲಾಯಿಸತಕ್ಕದ್ದು.

## ಅಧ್ಯಾಯ – VI

## ಇಂಧನಶಕ್ತಿಯ ಸಮರ್ಥ ಬಳಕೆಗೆ ಮತ್ತು ಅದರ ಸಂರಕ್ಷಣೆಗೆ ಅನುಕೂಲ ಕಲ್ಪಿಸುವ ಮತ್ತು ಅದನ್ನು ಜಾರಿಗೊಳಿಸುವ ರಾಜ್ಯ ಸರ್ಕಾರದ ಅಧಿಕಾರ

**15. ಇಂಧನಶಕ್ತಿಯ ಸಮರ್ಥ ಬಳಕೆ ಮತ್ತು ಅದರ ಸಂರಕ್ಷಣೆಗಾಗಿ ಕೆಲವು ಉಪಬಂಧಗಳನ್ನು ಜಾರಿಗೊಳಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ಬ್ಯೂರೋದೊಂದಿಗೆ ಸಮಾಲೋಚನೆ ನಡೆಸಿ ಅಧಿಸೂಚನೆಯ ಮೂಲಕ,–

(ಎ) ಪ್ರಾದೇಶಿಕ ಮತ್ತು ಸ್ಥಳೀಯ ಹವಾಮಾನಕ್ಕೆ ಹೊಂದುವಂತೆ ಇಂಧನಶಕ್ತಿ ಸಂರಕ್ಷಣಾ ಕಟ್ಟಡ ಸಂಹಿತೆಯನ್ನು ತಿದ್ದುಪಡಿ ಮಾಡಬಹುದು ಮತ್ತು ಅದು ರಚಿಸಿದ ನಿಯಮಗಳ ಮೂಲಕ ಕಟ್ಟಡಗಳಲ್ಲಿ ಇಂಧನಶಕ್ತಿ ಬಳಕೆಯ ಬಗ್ಗೆ ಇಂಧನಶಕ್ತಿ ಸಂರಕ್ಷಣಾ ಕಟ್ಟಡ ಸಂಹಿತೆಗಳನ್ನು ನಿರ್ದಿಷ್ಟಪಡಿಸಬಹುದು ಮತ್ತು ಅಧಿಸೂಚಿಸಬಹುದು;

(ಬಿ) ಹೆಸರಿಸಲಾದ ಬಳಕೆದಾರನಾಗಿರುವ, ಕಟ್ಟಡ ಅಥವಾ ಕಟ್ಟಡ ಸಂಕೀರ್ಣದ ಪ್ರತಿಯೊಬ್ಬ ಒಡೆಯನಿಗೆ ಅಥವಾ ಅಧಿಭೋಗದಾರನಿಗೆ, ಇಂಧನಶಕ್ತಿ ಸಂರಕ್ಷಣಾ ಕಟ್ಟಡ ಸಂಹಿತೆಗಳ ಉಪಬಂಧಗಳನ್ನು ಪಾಲಿಸುವಂತೆ ನಿರ್ದೇಶಿಸಬಹುದು;

(ಸಿ) ಇಂಧನಶಕ್ತಿಯ ಸಮರ್ಥ ಬಳಕೆ ಮತ್ತು ಅದರ ಸಂರಕ್ಷಣೆಗಾಗಿ ಅವಶ್ಯವೆಂದು ಪರ್ಯಾಲೋಚಿಸಿದರೆ, ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಮಧ್ಯಂತರದ ಕಾಲದಲ್ಲಿ ಅಂಗೀಕೃತ ಇಂಧನಶಕ್ತಿ ಸಂಪರೀಕ್ಷಕನಿಂದ ಇಂಧನಶಕ್ತಿ ಸಂಪರೀಕ್ಷೆಯನ್ನು ಮಾಡಿಸುವಂತೆ (ಬಿ) ಖಂಡದಲ್ಲಿ ಉಲ್ಲೇಖಿಸಿದ ಯಾರೇ ಹೆಸರಿಸಲಾದ ಬಳಕೆದಾರನಿಗೆ ನಿರ್ದೇಶನ ನೀಡಬಹುದು;

(ಡಿ) ಈ ಅಧಿನಿಯಮದ ಉಪಬಂಧಗಳನ್ನು ರಾಜ್ಯದೊಳಗೆ ಸಮನ್ವಯಗೊಳಿಸಲು, ವಿನಿಯಮಿಸಲು ಮತ್ತು ಜಾರಿಗೆ ತರಲು ಯಾವುದೇ ಏಜನ್ಸಿಯನ್ನು ಹೆಸರಿಸಲಾದ ಏಜನ್ಸಿ ಎಂದು ಹೆಸರಿಸಬಹುದು;

(ಇ) ಇಂಧನಶಕ್ತಿಯ ಸಮರ್ಥ ಬಳಕೆ ಮತ್ತು ಅದರ ಸಂರಕ್ಷಣೆಯ ಬಗ್ಗೆ ಅರಿವನ್ನು ಮೂಡಿಸಲು ಮತ್ತು ಮಾಹಿತಿಯನ್ನು ಪ್ರಸಾರ ಮಾಡಲು ಅವಶ್ಯಕವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬಹುದು;

(ಎಫ್) ಇಂಧನಶಕ್ತಿಯ ಸಮರ್ಥ ಬಳಕೆ ಮತ್ತು ಅದರ ಸಂರಕ್ಷಣೆಗಾಗಿ ಕಾರ್ಯತಂತ್ರದಲ್ಲಿ ಸಿಬ್ಬಂದಿ ಮತ್ತು ತಜ್ಞರಿಗೆ ತರಬೇತಿಯನ್ನು ಏರ್ಪಡಿಸಬಹುದು ಮತ್ತು ಸಂಘಟಿಸಬಹುದು;

(ಜಿ) ಸಮರ್ಥ ಇಂಧನಶಕ್ತಿ ಉಪಕರಣಗಳ ಅಥವಾ ಸಾಧನ ಸಾಮಗ್ರಿಗಳ ಬಳಕೆಯನ್ನು ಆದ್ಯತೆಯ ಮೇಲೆ ಮಾಡುವಂತೆ ಉತ್ತೇಜಿಸಲು ಕ್ರಮಗಳನ್ನು ತೆಗೆದುಕೊಳ್ಳಬಹುದು;

(ಹೆಚ್) ಯಾರೇ ಹೆಸರಿಸಲಾದ ಬಳಕೆದಾರನಿಗೆ, ತಾನು ರಚಿಸಿದ ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ನಮೂನೆ ಮತ್ತು ರೀತಿಯಲ್ಲಿ ಮತ್ತು ಅಂಥ ಅವಧಿಯೊಳಗೆ, ಅಂಥ ಬಳಕೆದಾರನು ಬಳಸಿದ ಇಂಧನಶಕ್ತಿಯ ಬಗ್ಗೆ ಮಾಹಿತಿಯನ್ನು ಹೆಸರಿಸಲಾದ ಏಜನ್ಸಿಗೆ ಒದಗಿಸುವಂತೆ ನಿರ್ದೇಶಿಸಬಹುದು;

(ಐ) 17ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಪರಿಶೀಲನೆಯ ಉದ್ದೇಶಗಳಿಗಾಗಿ ಸೇರಿಸಬೇಕಾದ ವಿಷಯಗಳನ್ನು ನಿರ್ದಿಷ್ಟಪಡಿಸಬಹುದು.

**16. ರಾಜ್ಯ ಸರ್ಕಾರದಿಂದ ನಿಧಿಯ ಸ್ಥಾಪನೆ.–** (1) ರಾಜ್ಯ ಸರ್ಕಾರವು, ರಾಜ್ಯದೊಳಗೆ ಇಂಧನಶಕ್ತಿಯ ಸಮರ್ಥ ಬಳಕೆ ಮತ್ತು ಅದರ ಸಂರಕ್ಷಣೆಯನ್ನು ಉತ್ತೇಜಿಸುವ ಉದ್ದೇಶಗಳಿಗಾಗಿ ರಾಜ್ಯ ಇಂಧನಶಕ್ತಿ ಸಂರಕ್ಷಣಾ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು.

(2) ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಸರ್ಕಾರವು ಅಥವಾ ಕೇಂದ್ರ ಸರ್ಕಾರವು ಅಥವಾ ಇತರ ಯಾವುದೇ ಸಂಘಟನೆಯು ಅಥವಾ ವ್ಯಕ್ತಿಯು ನೀಡಬಹುದಾದ ಎಲ್ಲಾ ಅನುದಾನಗಳನ್ನು ಮತ್ತು ಸಾಲಗಳನ್ನು ನಿಧಿಗೆ ಜಮೆ ಮಾಡತಕ್ಕದ್ದು.

(3) ಈ ಅಧಿನಿಯಮದ ಉಪಬಂಧಗಳನ್ನು ಅನುಷ್ಠಾನಗೊಳಿಸುವುದಕ್ಕಾಗಿ ತಗಲುವ ವೆಚ್ಚಗಳನ್ನು ಭರಿಸಲು ನಿಧಿಯನ್ನು ವಿನಿಯೋಗಿಸತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ಸೃಜಿಸಿದ ನಿಧಿಯನ್ನು ರಾಜ್ಯ ಸರ್ಕಾರವು ರಚಿಸಿದ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅಂಥ ವ್ಯಕ್ತಿಗಳು ಅಥವಾ ಯಾವುದೇ ಪ್ರಾಧಿಕಾರವು ಅಂಥ ರೀತಿಯಲ್ಲಿ ನಿರ್ವಹಿಸತಕ್ಕದ್ದು.

**17. ಪರಿಶೀಲನೆಯ ಅಧಿಕಾರ.–** (1) ಹೆಸರಿಸಲಾದ ಏಜೆನ್ಸಿಯು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಐದು ವರ್ಷಗಳು ಮುಕ್ತಾಯವಾದ ತರುವಾಯ, 14ನೇ ಪ್ರಕರಣದ (ಎ) ಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ಇಂಧನಶಕ್ತಿ ಬಳಕೆಯ ಮಾನಕಗಳ ಪಾಲನೆಯನ್ನು ಸುನಿಶ್ಚಿತಗೊಳಿಸುವ ಉದ್ದೇಶಕ್ಕಾಗಿ ಅಥವಾ 14ನೇ ಪ್ರಕರಣದ (ಬಿ) ಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ಉಪಕರಣಗಳ ಅಥವಾ ಸಾಧನ ಸಾಮಗ್ರಿಗಳ ಮೇಲೆ ಗುರುತು ಚೀಟಿಯಲ್ಲಿ ವಿವರಗಳನ್ನು ಪ್ರದರ್ಶಿಸುವುದನ್ನು ಸುನಿಶ್ಚಿತಗೊಳಿಸುವ ಉದ್ದೇಶಕ್ಕಾಗಿ ಅಥವಾ ಅವರಿಗೆ ವಹಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ, ಅವಶ್ಯಕವೆನಿಸಬಹುದಾದಷ್ಟು ಸಂಖ್ಯೆಯ ಪರಿಶೀಲನಾಧಿಕಾರಿಗಳನ್ನು ನೇಮಕ ಮಾಡಬಹುದು.

(2) ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುವೇ ನಿಯಮಗಳಿಗೆ ಒಳಪಟ್ಟು, ಪರಿಶೀಲನಾ ಅಧಿಕಾರಿಯು,–

(ಎ) 14ನೇ ಪ್ರಕರಣದ (ಬಿ) ಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ಉಪಕರಣಗಳ ಅಥವಾ ಸಾಧನ ಸಾಮಗ್ರಿಗಳ ಅಥವಾ ಯಾವುದಕ್ಕೆ ಸಂಬಂಧಿಸಿದಂತೆ, 14ನೇ ಪ್ರಕರಣದ (ಎ) ಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ಇಂಧನಶಕ್ತಿ ಬಳಕೆಯ ಮಾನಕಗಳನ್ನು ನಿರ್ದಿಷ್ಟಪಡಿಸಲಾಗಿದೆಯೋ ಅವುಗಳ ಸಂಬಂಧದಲ್ಲಿ ನಿರ್ವಹಿಸಲಾದ ಯಾವುದೇ ಕಾರ್ಯಾಚರಣೆಯನ್ನು ಪರಿಶೀಲಿಸಲು;

(ಬಿ) ಯಾವುದೇ ಚಟುವಟಿಕೆಗಾಗಿ ಇಂಧನಶಕ್ತಿಯನ್ನು ಬಳಸುವ ಹೆಸರಿಸಲಾದ ಬಳಕೆದಾರನ ಯಾವುದೇ ಸ್ಥಳವನ್ನು ಪ್ರವೇಶಿಸಲು

– ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಇಂಧನಶಕ್ತಿಯ ನೆರವಿನಿಂದ ಯಾವುದೇ ಚಟುವಟಿಕೆಯನ್ನು ನಡೆಸುವಲ್ಲಿ ಯಾವುದೇ ರೀತಿಯಲ್ಲಿ ತೊಡಗಿರುವ ಅಥವಾ ಸಹಾಯ ಮಾಡುವ ಯಾರೇ ಮಾಲೀಕ, ನೌಕರ, ನಿರ್ದೇಶಕ, ವ್ಯವಸ್ಥಾಪಕ ಅಥವಾ ಕಾರ್ಯದರ್ಶಿ ಅಥವಾ ಯಾರೇ ಇತರ ವ್ಯಕ್ತಿಯನ್ನು,–

(i) (ಎ) ತಾನು ಅಗತ್ಯಪಡಿಸಬಹುದಾದಂಥ ಮತ್ತು ಅಂಥ ಸ್ಥಳಗಳಲ್ಲಿ ಲಭ್ಯವಿರಬಹುದಾದ ಯಾವುವೇ ಉಪಕರಣಗಳನ್ನು ಅಥವಾ ಸಾಧನ ಸಾಮಗ್ರಿಗಳನ್ನು ಪರಿಶೀಲಿಸಲು;

(ಬಿ) ಇಂಧನಶಕ್ತಿ ಬಳಕೆ ಪ್ರಮಾಣಗಳನ್ನು ಮತ್ತು ಮಾನಕಗಳನ್ನು ಖಚಿತ ಪಡಿಸಿಕೊಳ್ಳಲು ಯಾವುದೇ ಉತ್ಪಾದನಾ ಪ್ರಕ್ರಿಯೆಯನ್ನು ಪರಿಶೀಲಿಸಲು ಅವನಿಗೆ ಅಗತ್ಯವಿರುವ ಸೌಲಭ್ಯವನ್ನು ಒದಗಿಸಲು;

(ii) ಅವನು ಪರೀಕ್ಷಿಸಿದ ಅಥವಾ ಸತ್ಯಾಪನೆ ಮಾಡಿದ ಯಾವುವೇ ಉಪಕರಣದ ಅಥವಾ ಸಾಧನ ಸಾಮಗ್ರಿಯ ದಾಸ್ತಾನಿನ ವಿವರಣಾ ಪಟ್ಟಿ ತಯಾರಿಸಲು;

(iii) ಈ ಅಧಿನಿಯಮದ ಮೇರೆಗೆ ಇಂಧನಶಕ್ತಿಯ ಸಮರ್ಥ ಬಳಕೆ ಮತ್ತು ಅದರ ಸಂರಕ್ಷಣೆಗಾಗಿ ಉಪಯುಕ್ತವಾಗಬಹುದಾದ ಅಥವಾ ಸುಸಂಗತವಾಗಬಹುದಾದ ಯಾರೇ ವ್ಯಕ್ತಿಯ ಹೇಳಿಕೆಯನ್ನು ದಾಖಲಿಸಲು

– ಅಗತ್ಯಪಡಿಸಬಹುದು.

(3) ಪರಿಶೀಲನಾ ಅಧಿಕಾರಿಯು,–

(ಎ) ಇಂಧನಶಕ್ತಿ ಸಹಾಯದಿಂದ ಯಾವುದೇ ಚಟುವಟಿಕೆ ನಡೆಸುತ್ತಿರುವ; ಮತ್ತು

(ಬಿ) 14ನೇ ಪ್ರಕರಣದ (ಬಿ) ಖಂಡದ ಮೇರೆಗೆ ಅಧಿಸೂಚಿತವಾದ ಯಾವುದೇ ಉಪಕರಣ ಅಥವಾ ಸಾಧನ ಸಾಮಗ್ರಿಯನ್ನು ಇಟ್ಟಿರುವ

– ಹೆಸರಿಸಲಾದ ಬಳಕೆದಾರನ ಯಾವುದೇ ಸ್ಥಳವನ್ನು, ಅಂಥ ಸ್ಥಳವು ಉತ್ಪಾದನೆಗಾಗಿ ಅಥವಾ ಅದಕ್ಕೆ ಸಂಬಂಧಿಸಿದ ವ್ಯವಹಾರವನ್ನು ನಡೆಸುವುದಕ್ಕಾಗಿ ತೆರೆದಿರುವ ವೇಳೆಗಳ ಅವಧಿಯಲ್ಲಿ ಪ್ರವೇಶಿಸಬಹುದು.

(4) ಈ ಪ್ರಕರಣದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಪರಿಶೀಲನಾ ಅಧಿಕಾರಿಯು, ಅವನು ಪ್ರವೇಶಿಸಿರುವ ಸ್ಥಳದಿಂದ ಯಾವುದೇ ಉಪಕರಣವನ್ನು ಅಥವಾ ಸಾಧನ ಸಾಮಗ್ರಿಯನ್ನು ಅಥವಾ ಲೆಕ್ಕ ಪುಸ್ತಕಗಳು

ಅಥವಾ ಇತರ ದಸ್ತಾವೇಜುಗಳನ್ನು ಯಾವುದೇ ಕಾರಣಕ್ಕಾಗಿ ಸಾಗಿಸತಕ್ಕದ್ದಲ್ಲ ಅಥವಾ ಸಾಗಿಸುವಂತೆ ಮಾಡತಕ್ಕದ್ದಲ್ಲ.

18. **ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಅಧಿಕಾರ.**- ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇರೆಗೆ ತನ್ನ ಅಧಿಕಾರಗಳನ್ನು ಚಲಾಯಿಸುವಲ್ಲಿ ಅಥವಾ ತನ್ನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಮತ್ತು ಇಂಧನಶಕ್ತಿಯ ಸಮರ್ಥ ಬಳಕೆ ಮತ್ತು ಅದರ ಸಂರಕ್ಷಣೆಗಾಗಿ, ಯಾರೇ ವ್ಯಕ್ತಿಗೆ, ಅಧಿಕಾರಿಗೆ, ಪ್ರಾಧಿಕಾರಕ್ಕೆ ಅಥವಾ ಯಾರೇ ಹೆಸರಿಸಲಾದ ಬಳಕೆದಾರನಿಗೆ ಈ ಅಧಿನಿಯಮದ ಉದ್ದೇಶಗಳಿಗಾಗಿ ತಾನು ಸೂಕ್ತವೆಂದು ಭಾವಿಸುವಂಥ ನಿರ್ದೇಶನಗಳನ್ನು ಲಿಖಿತದಲ್ಲಿ ನೀಡಬಹುದು ಮತ್ತು ಅಂಥ ವ್ಯಕ್ತಿಯು ಅಥವಾ ಅಧಿಕಾರಿಯು ಅಥವಾ ಪ್ರಾಧಿಕಾರವು ಅಥವಾ ಹೆಸರಿಸಲಾದ ಯಾರೇ ಬಳಕೆದಾರನು ಅಂಥ ನಿರ್ದೇಶನಗಳನ್ನು ಪಾಲಿಸಲು ಬದ್ಧವಾಗಿರತಕ್ಕದ್ದು.

**ವಿವರಣೆ.**- ಸಂದೇಹಗಳ ನಿವಾರಣೆಗಾಗಿ, ಈ ಪ್ರಕರಣದ ಮೇರೆಗೆ ನಿರ್ದೇಶನಗಳನ್ನು ನೀಡುವ ಅಧಿಕಾರವು,-

(ಎ) ಯಾವುದೇ ಉದ್ಯಮ ಅಥವಾ ಕಟ್ಟಡ ಅಥವಾ ಕಟ್ಟಡ ಸಂಕೀರ್ಣದಲ್ಲಿ ಪ್ರಕ್ರಿಯೆ ಮತ್ತು ಇಂಧನಶಕ್ತಿಯ ಬಳಕೆಯ ಮಾನಕಗಳಿಗಾಗಿ ಪ್ರಮಾಣಗಳ ವಿನಿಯಮನಗಳನ್ನು; ಅಥವಾ

(ಬಿ) ಉಪಕರಣಗಳಿಗಾಗಿ ಮತ್ತು ಸಾಧನ ಸಾಮಗ್ರಿಗಳಿಗಾಗಿ ಇಂಧನಶಕ್ತಿ ಬಳಕೆಯ ಮಾನಕಗಳ ವಿನಿಯಮನಗಳನ್ನು

- ನಿರ್ದೇಶಿಸುವ ಅಧಿಕಾರವನ್ನು ಒಳಗೊಂಡಿರುತ್ತದೆ ಎಂದು ಈ ಮೂಲಕ ಘೋಷಿಸಲಾಗಿದೆ.

## ಅಧ್ಯಾಯ – VII

## ಬ್ಯೂರೋದ ಹಣಕಾಸು, ಲೆಕ್ಕಗಳು ಮತ್ತು ಲೆಕ್ಕಪರಿಶೋಧನೆ

19. **ಕೇಂದ್ರ ಸರ್ಕಾರದಿಂದ ಅನುದಾನಗಳು ಮತ್ತು ಸಾಲಗಳು.**- ಕೇಂದ್ರ ಸರ್ಕಾರವು, ಕಾನೂನಿನ ಮೂಲಕ ಈ ಪರವಾಗಿ ಸಂಸತ್ತು ಯುಕ್ತ ಹಂಚಿಕೆ ಮಾಡಿದ ನಂತರ, ಕೇಂದ್ರ ಸರ್ಕಾರವು ಅವಶ್ಯಕವೆಂದು ಪರ್ಯಾಲೋಚಿಸಬಹುದಾದಂತೆ ಹಣದ ಅಂಥ ಮೊತ್ತಗಳ ಅನುದಾನಗಳನ್ನು ಮತ್ತು ಸಾಲಗಳನ್ನು ಬ್ಯೂರೋಗೆ ಅಥವಾ ರಾಜ್ಯ ಸರ್ಕಾರಗಳಿಗೆ ನೀಡಬಹುದು.

20. **ಕೇಂದ್ರ ಸರ್ಕಾರದಿಂದ ನಿಧಿಯ ಸ್ಥಾಪನೆ.**- (1) ಕೇಂದ್ರ ಇಂಧನಶಕ್ತಿ ಸಂರಕ್ಷಣಾ ನಿಧಿ ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಅದಕ್ಕೆ,-

(ಎ) 19ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಬ್ಯೂರೋಗೆ ನೀಡಿದ ಯಾವುವೇ ಅನುದಾನಗಳನ್ನು ಮತ್ತು ಸಾಲಗಳನ್ನು;

(ಬಿ) ಈ ಅಧಿನಿಯಮದ ಮೇರೆಗೆ ಬ್ಯೂರೋ ಸ್ವೀಕರಿಸಿದ ಎಲ್ಲಾ ಫೀಜುಗಳನ್ನು;

(ಸಿ) ಕೇಂದ್ರ ಸರ್ಕಾರವು ತೀರ್ಮಾನಿಸಬಹುದಾದಂಥ ಇತರ ಮೂಲಗಳಿಂದ ಬ್ಯೂರೋ ಸ್ವೀಕರಿಸಿದ ಎಲ್ಲಾ ಮೊತ್ತಗಳನ್ನು

– ಜಮೆ ಮಾಡತಕ್ಕದ್ದು.

(2) ನಿಧಿಯನ್ನು, –

(ಎ) ಬ್ಯೂರೋದ ಮಹಾನಿರ್ದೇಶಕ, ಕಾರ್ಯದರ್ಶಿ, ಅಧಿಕಾರಿಗಳು ಮತ್ತು ಇತರ ನೌಕರರ ಸಂಬಳ, ಭತ್ಯೆಗಳು ಮತ್ತು ಇತರ ಪರಿಶ್ರಮ ಧನವನ್ನು;

(ಬಿ) 13ನೇ ಪ್ರಕರಣದ ಮೇರೆಗೆ ಬ್ಯೂರೋದ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಅದಕ್ಕೆ ಉಂಟಾದ ವೆಚ್ಚಗಳನ್ನು;

(ಸಿ) 4ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಆಡಳಿತ ಪರಿಷತ್ತಿನ ಸದಸ್ಯರುಗಳಿಗೆ ಸಂದಾಯ ಮಾಡಬೇಕಾದ ಫೀಜು ಮತ್ತು ಭತ್ಯೆಗಳನ್ನು;

(ಡಿ) ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಿದ ಧ್ಯೇಯಗಳು ಮತ್ತು ಉದ್ದೇಶಗಳಿಗಾಗಿ ವೆಚ್ಚಗಳನ್ನು

– ಭರಿಸಲು ವಿನಿಯೋಗಿಸತಕ್ಕದ್ದು.

**21. ಬ್ಯೂರೋದ ಸಾಲ ಪಡೆಯುವ ಅಧಿಕಾರಗಳು.–** (1) ಬ್ಯೂರೋ, ಕೇಂದ್ರ ಸರ್ಕಾರದ ಸಮ್ಮತಿಯೊಂದಿಗೆ ಅಥವಾ ಕೇಂದ್ರ ಸರ್ಕಾರವು ಅದಕ್ಕೆ ನೀಡಿದ ಯಾವುದೇ ಸಾಮಾನ್ಯ ಅಥವಾ ವಿಶೇಷ ಅಧಿಕಾರದ ಅನುಸಾರವಾಗಿ ಈ ಅಧಿನಿಯಮದ ಮೇರೆಗೆ ಅದರ ಎಲ್ಲಾ ಪ್ರಕಾರ್ಯಗಳನ್ನು ಅಥವಾ ಯಾವುದೇ ಪ್ರಕಾರ್ಯವನ್ನು ನಿರ್ವಹಿಸುವುದಕ್ಕಾಗಿ ಅದು ಸೂಕ್ತವೆಂದು ಭಾವಿಸಬಹುದಾದಂತೆ ಯಾವುದೇ ಮೂಲದಿಂದ ಹಣವನ್ನು ಸಾಲವಾಗಿ ಪಡೆಯಬಹುದು.

(2) ಕೇಂದ್ರ ಸರ್ಕಾರವು, (1)ನೇ ಉಪಪ್ರಕರಣದ ಮೇರೆಗೆ ಬ್ಯೂರೋ ಪಡೆದ ಸಾಲದ ಸಂಬಂಧದಲ್ಲಿ ಅಸಲು ಮತ್ತು ಅದರ ಮೇಲಿನ ಬಡ್ಡಿಯನ್ನು ಮರು ಸಂದಾಯ ಮಾಡಲು, ಅದು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಖಾತರಿ ನೀಡಬಹುದು.

**22. ಆಯವ್ಯಯ.–** ಬ್ಯೂರೋ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದೊಳಗೆ ಮುಂದಿನ ಹಣಕಾಸು ವರ್ಷಕ್ಕಾಗಿ ಬ್ಯೂರೋದ ಅಂದಾಜು ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ತೋರಿಸುವ ಅದರ ಆಯವ್ಯಯುವನ್ನು, ತಯಾರಿಸತಕ್ಕದ್ದು ಮತ್ತು ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

**23. ವಾರ್ಷಿಕ ವರದಿ.–** ಬ್ಯೂರೋ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ಪ್ರತಿ ಹಣಕಾಸು ವರ್ಷದಲ್ಲಿ, ಹಿಂದಿನ ಹಣಕಾಸು ವರ್ಷದ ಅವಧಿಯಲ್ಲಿ ಮಾಡಿದ ಅದರ ಚಟುವಟಿಕೆಗಳ ಪೂರ್ಣ ವಿವರವನ್ನು ನೀಡುವ ಅದರ ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು, ಮತ್ತು ಅದರ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

**24. ವಾರ್ಷಿಕ ವರದಿಯನ್ನು ಸಂಸತ್ತಿನ ಮುಂದೆ ಇರಿಸುವುದು.–** ಕೇಂದ್ರ ಸರ್ಕಾರವು, 23ನೇ ಪ್ರಕರಣದಲ್ಲಿ ಉಲ್ಲೇಖಿಸಿದ ವಾರ್ಷಿಕ ವರದಿಯನ್ನು ಸ್ವೀಕರಿಸಿದ ನಂತರ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದನ್ನು ಇಡುವಂತೆ ಮಾಡತಕ್ಕದ್ದು.

19

**25. ಲೆಕ್ಕಗಳು ಮತ್ತು ಲೆಕ್ಕಪರಿಶೋಧನೆ.**- (1) ಬ್ಯೂರೋ, ಭಾರತದ ಲೆಕ್ಕ ನಿಯಂತ್ರಕ - ಹಾಗೂ - ಮಹಾಲೆಕ್ಕ ಪರಿಶೋಧಕನೊಂದಿಗೆ ಸಮಾಲೋಚಿಸಿ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ, ಸೂಕ್ತ ಲೆಕ್ಕಗಳನ್ನು ಮತ್ತು ಇತರ ಸುಸಂಗತ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಮತ್ತು ಲೆಕ್ಕಗಳ ವಾರ್ಷಿಕ ವಿವರಪತ್ರವನ್ನು ತಯಾರಿಸತಕ್ಕದ್ದು.

(2) ಬ್ಯೂರೋದ ಲೆಕ್ಕಗಳನ್ನು, ಭಾರತದ ಲೆಕ್ಕನಿಯಂತ್ರಕ - ಹಾಗೂ - ಮಹಾಲೆಕ್ಕ ಪರಿಶೋಧಕನು ನಿಯಮಿಸಬಹುದಾದಂಥ ಮಧ್ಯಂತರ ಅವಧಿಗಳಲ್ಲಿ ಆತನು ಲೆಕ್ಕಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ತಗುಲಿದ ವೆಚ್ಚಗಳನ್ನು ಬ್ಯೂರೋ ಲೆಕ್ಕನಿಯಂತ್ರಕ - ಹಾಗೂ - ಮಹಾಲೆಕ್ಕಪರಿಶೋಧಕನಿಗೆ ಸಂದಾಯ ಮಾಡತಕ್ಕದ್ದು.

(3) ಬ್ಯೂರೋ ಲೆಕ್ಕಗಳ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಭಾರತದ ಲೆಕ್ಕನಿಯಂತ್ರಕ - ಹಾಗೂ - ಮಹಾಲೆಕ್ಕಪರಿಶೋಧಕ ಮತ್ತು ಆತನಿಂದ ನೇಮಕಗೊಂಡ ಯಾರೇ ಇತರ ವ್ಯಕ್ತಿಯು ಲೆಕ್ಕಗಳ ಬಗ್ಗೆ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ, ಲೆಕ್ಕನಿಯಂತ್ರಕ - ಹಾಗೂ - ಮಹಾಲೆಕ್ಕಪರಿಶೋಧಕನು ಹೊಂದಿರುವಂಥವೇ ಹಕ್ಕುಗಳು ಮತ್ತು ವಿಶೇಷಾಧಿಕಾರ ಮತ್ತು ಅಧಿಕಾರವನ್ನು ಅವನು ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ ಪುಸ್ತಕಗಳನ್ನು, ಲೆಕ್ಕಗಳನ್ನು, ಅದಕ್ಕೆ ಸಂಬಂಧಿಸಿದ ವೋಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಮತ್ತು ಪತ್ರಗಳನ್ನು ಹಾಜರುಪಡಿಸುವಂತೆ ಕೇಳುವ ಮತ್ತು ಬ್ಯೂರೋದ ಯಾವುದೇ ಕಚೇರಿಯನ್ನು ತಪಾಸಣೆ ಮಾಡುವ ಹಕ್ಕುಗಳನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕನಿಯಂತ್ರಕ - ಹಾಗೂ - ಮಹಾಲೆಕ್ಕಪರಿಶೋಧಕನು ಅಥವಾ ಈ ಬಗ್ಗೆ ಅವನಿಂದ ನೇಮಕಗೊಂಡ ಯಾರೇ ವ್ಯಕ್ತಿಯು ಪ್ರಮಾಣೀಕರಿಸಿದ ಬ್ಯೂರೋದ ಲೆಕ್ಕಗಳನ್ನು ಲೆಕ್ಕಪರಿಶೋಧನಾ ವರದಿಯ ಜೊತೆಗೆ ಕೇಂದ್ರ ಸರ್ಕಾರಕ್ಕೆ ಪ್ರತಿ ವರ್ಷವೂ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕದ್ದು.

## ಅಧ್ಯಾಯ - VII

## ದಂಡಗಳು ಮತ್ತು ನ್ಯಾಯ ನಿರ್ಣಯ

**26. ದಂಡ.**- (1) 14ನೇ ಪ್ರಕರಣದ (ಸಿ) ಖಂಡ ಅಥವಾ (ಡಿ) ಖಂಡ ಅಥವಾ (ಹೆಚ್) ಖಂಡ ಅಥವಾ (ಐ) ಖಂಡ ಅಥವಾ (ಕೆ) ಖಂಡ ಅಥವಾ (ಎಲ್) ಖಂಡ ಅಥವಾ (ಎನ್) ಖಂಡ ಅಥವಾ (ಆರ್) ಖಂಡ ಅಥವಾ (ಎಸ್) ಖಂಡ ಅಥವಾ 15ನೇ ಪ್ರಕರಣದ (ಬಿ) ಖಂಡ ಅಥವಾ (ಸಿ) ಖಂಡ ಅಥವಾ (ಹೆಚ್) ಖಂಡದ ಉಪಬಂಧಗಳನ್ನು ಪಾಲಿಸಲು ಯಾರೇ ವ್ಯಕ್ತಿಯು ವಿಫಲನಾದರೆ, ಅವನು ಅಂಥ ಪ್ರತಿಯೊಂದು ವಿಫಲತೆಗಾಗಿ ಹತ್ತು ಸಾವಿರ ರೂಪಾಯಿಗಳನ್ನು ಮೀರದ ದಂಡಕ್ಕೆ ಗುರಿಯಾಗತಕ್ಕದ್ದು ಮತ್ತು ವಿಫಲತೆಯು ಮುಂದುವರಿದ ಸಂದರ್ಭದಲ್ಲಿ, ಅಂಥ ವಿಫಲತೆಯು ಮುಂದುವರೆಯುತ್ತಿರುವ ಅವಧಿಯ ಪ್ರತಿಯೊಂದು ದಿನಕ್ಕಾಗಿ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಹೆಚ್ಚುವರಿ ದಂಡ ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು:

ಪರಂತು ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಐದು ವರ್ಷದ ಒಳಗೆ ಯಾರೇ ವ್ಯಕ್ತಿಯು ದಂಡ ಸಂದಾಯ ಮಾಡಲು ಬದ್ಧನಾಗಿರತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಸಂದಾಯವಾಗಬೇಕಾದ ಯಾವುದೇ ಮೊಬಲಗನ್ನು ಸಂದಾಯ ಮಾಡಿರದಿದ್ದರೆ, ಅದನ್ನು ಭೂ ಕಂದಾಯದ ಬಾಕಿಯಂತೆ ವಸೂಲು ಮಾಡಬಹುದು.

**27. ನ್ಯಾಯ ನಿರ್ಣಯ ಮಾಡುವ ಅಧಿಕಾರ.–** (1) 26ನೇ ಪ್ರಕರಣದ ಮೇರೆಗೆ ನ್ಯಾಯ ನಿರ್ಣಯವನ್ನು ಮಾಡುವ ಉದ್ದೇಶಕ್ಕಾಗಿ, ರಾಜ್ಯ ಆಯೋಗವು, ಯಾವುದೇ ದಂಡವನ್ನು ವಿಧಿಸುವ ಉದ್ದೇಶಕ್ಕಾಗಿ, ಸಂಬಂಧಪಟ್ಟ ಯಾರೇ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ನಂತರ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ವಿಚಾರಣೆಯನ್ನು ನಡೆಸುವುದಕ್ಕಾಗಿ ಅದರ ಯಾರೇ ಸದಸ್ಯನನ್ನು ನ್ಯಾಯನಿರ್ಣಯ ಅಧಿಕಾರಿಯಾಗಿ ನೇಮಕ ಮಾಡತಕ್ಕದ್ದು.

(2) ಒಂದು ವಿಚಾರಣೆಯನ್ನು ನಡೆಸುವಾಗ, ನ್ಯಾಯನಿರ್ಣಯ ಅಧಿಕಾರಿಯು ಮೊಕದ್ದಮೆಯ ಸಂಗತಿಗಳ ಮತ್ತು ಪರಿಸ್ಥಿತಿಯ ಬಗ್ಗೆ ತಿಳಿದಿರುವ, ವಿಚಾರಣೆಯ ವಸ್ತು ವಿಷಯಕ್ಕೆ ಉಪಯೋಗವಾಗಬಹುದೆಂದು ಅಥವಾ ಸುಸಂಬದ್ಧವಾಗಬಹುದೆಂದು ಆತನು ಅಭಿಪ್ರಾಯಪಡುವ ಸಾಕ್ಷ್ಯವನ್ನು ನೀಡುವುದಕ್ಕಾಗಿ ಅಥವಾ ಯಾವುದೇ ದಸ್ತಾವೇಜನ್ನು ಒದಗಿಸುವುದಕ್ಕಾಗಿ ಯಾರೇ ವ್ಯಕ್ತಿಯನ್ನು ಸಮನು ಮಾಡಲು ಮತ್ತು ಆತನ ಹಾಜರಾತಿಯನ್ನು ಒತ್ತಾಯಿಸಲು ಅಧಿಕಾರ ಹೊಂದಿರತಕ್ಕದ್ದು ಮತ್ತು ಅಂಥ ವಿಚಾರಣೆಯ ತರುವಾಯ 26ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಕರಣಗಳ ಯಾವುದೇ ಖಂಡಗಳ ಉಪಬಂಧಗಳನ್ನು ಪಾಲಿಸಲು ಆ ವ್ಯಕ್ತಿಯು ವಿಫಲನಾಗಿರುವನೆಂದು ನ್ಯಾಯನಿರ್ಣಯಾಧಿಕಾರಿಗೆ ಮನದಟ್ಟಾದರೆ, ಆ ಪ್ರಕರಣದ ಅಂಥ ಯಾವುವೇ ಖಂಡಗಳ ಉಪಬಂಧಗಳಿಗನುಸಾರವಾಗಿ ಅವನು ಸೂಕ್ತವೆಂದು ಭಾವಿಸುವಂಥ ದಂಡವನ್ನು ಅವನಿಗೆ ವಿಧಿಸಬಹುದು:

ಪರಂತು, ಯಾವುದೇ ರಾಜ್ಯದಲ್ಲಿ ರಾಜ್ಯ ಆಯೋಗವು ಸ್ಥಾಪನೆ ಆಗಿಲ್ಲದಿರುವಾಗ, ಆ ರಾಜ್ಯ ಸರ್ಕಾರವು, ಈ ಪ್ರಕರಣದ ಉದ್ದೇಶಗಳಿಗಾಗಿ ಆ ರಾಜ್ಯದಲ್ಲಿ ಕಾನೂನು ವ್ಯವಹಾರಗಳನ್ನು ಕುರಿತು ವ್ಯವಹರಿಸುವ ಕಾರ್ಯದರ್ಶಿಗೆ ಸಮನಾದ ದರ್ಜೆಗೆ ಕಡಿಮೆ ಇಲ್ಲದ ಅದರ ಯಾರೇ ಅಧಿಕಾರಿಯನ್ನು ನ್ಯಾಯನಿರ್ಣಯ ಅಧಿಕಾರಿಯನ್ನಾಗಿ ನೇಮಕ ಮಾಡತಕ್ಕದ್ದು ಮತ್ತು ಅಂಥ ಅಧಿಕಾರಿಯು ಆ ರಾಜ್ಯದಲ್ಲಿ ರಾಜ್ಯ ಆಯೋಗದ ಸ್ಥಾಪನೆಯ ನಂತರ ನ್ಯಾಯನಿರ್ಣಯ ಅಧಿಕಾರಿ ನೇಮಕವಾದ ತಕ್ಷಣವೇ ಅಂಥ ನ್ಯಾಯ ನಿರ್ಣಯ ಅಧಿಕಾರಿಯಾಗಿರುವುದು ನಿಂತುಹೋಗತಕ್ಕದ್ದು:

ಮತ್ತೂ ಪರಂತು, ರಾಜ್ಯ ಸರ್ಕಾರದಿಂದ ನೇಮಕಗೊಂಡಿದ್ದ ಒಬ್ಬ ನ್ಯಾಯನಿರ್ಣಯ ಅಧಿಕಾರಿಯು ನ್ಯಾಯನಿರ್ಣಯ ಅಧಿಕಾರಿಯಾಗಿರುವುದು ನಿಂತುಹೋದಾಗ, ಅವನು ನ್ಯಾಯನಿರ್ಣಯ ಮಾಡುತ್ತಿದ್ದ ಎಲ್ಲಾ ವಿಷಯಗಳನ್ನು ರಾಜ್ಯ ಆಯೋಗದಿಂದ ನೇಮಕಗೊಂಡ ನ್ಯಾಯನಿರ್ಣಯ ಅಧಿಕಾರಿಗೆ ವರ್ಗಾವಣೆ ಮಾಡತಕ್ಕದ್ದು ಮತ್ತು ಅನಂತರ ರಾಜ್ಯ ಆಯೋಗದಿಂದ ನೇಮಕಗೊಂಡ ನ್ಯಾಯ ನಿರ್ಣಯ ಅಧಿಕಾರಿಯು ಅಂಥ ವಿಷಯಗಳ ಮೇಲಿನ ದಂಡಗಳ ಬಗ್ಗೆ ನ್ಯಾಯ ನಿರ್ಣಯ ಮಾಡತಕ್ಕದ್ದು.

**28. ನ್ಯಾಯನಿರ್ಣಯ ಅಧಿಕಾರಿಯು ಗಣನೆಗೆ ತೆಗೆದುಕೊಳ್ಳಬೇಕಾದ ಸಂಗತಿಗಳು.–** 26ನೇ ಪ್ರಕರಣದ ಮೇರೆಗೆ ದಂಡದ ಪ್ರಮಾಣದ ಬಗ್ಗೆ ನ್ಯಾಯನಿರ್ಣಯ ಮಾಡುವಾಗ, ನ್ಯಾಯನಿರ್ಣಯ ಅಧಿಕಾರಿಯು ಈ ಮುಂದಿನ ವಿಷಯಗಳ ಬಗ್ಗೆ ಎಂದರೆ:–

(ಎ) ತಪ್ಪಿದುದರ ಪರಿಣಾಮವಾಗಿ ಉಂಟಾದ ಆ ಅಸಮಪ್ರಮಾಣದ ಗಳಿಕೆಯ ಮೊಬಲಗಿನ ಅಥವಾ ಅನುಚಿತ ಪ್ರಯೋಜನದ ಪ್ರಮಾಣ ಎಷ್ಟೆಂಬುದನ್ನು ಲೆಕ್ಕಹಾಕಬಹುದಾದರೆ ಅವುಗಳ ಪ್ರಮಾಣ;

(ಬಿ) ತಪ್ಪಿದುದರ ಪುನರಾವರ್ತನೆಯ ಸ್ವರೂಪ

– ಇವುಗಳ ಬಗ್ಗೆ ಯುಕ್ತ ಗಮನ ನೀಡತಕ್ಕದ್ದು.

**29. ಸಿವಿಲ್ ನ್ಯಾಯಾಲಯವು ಅಧಿಕಾರ ವ್ಯಾಪ್ತಿ ಹೊಂದಿಲ್ಲದಿರುವುದು.–** ಈ ಅಧಿನಿಯಮದ ಮೇರೆಗೆ ನೇಮಕಗೊಂಡ ನ್ಯಾಯನಿರ್ಣಯ ಅಧಿಕಾರಿಯು ಅಥವಾ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅಪೀಲು ನ್ಯಾಯಾಧಿಕರಣವು ನಿರ್ಣಯಿಸಲು ಅಧಿಕಾರ ಹೊಂದಿರುವ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ದಾವೆಯನ್ನು ಅಥವಾ ವ್ಯವಹರಣೆಯನ್ನು ಪುರಸ್ಕರಿಸಲು ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರ ವ್ಯಾಪ್ತಿ ಹೊಂದಿರತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಮೂಲಕ ಅದರ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರದ ಅನುಸರಣೆಯಲ್ಲಿ ಕೈಗೊಂಡ ಅಥವಾ ಕೈಗೊಳ್ಳುವ ಯಾವುದೇ ಕ್ರಮದ ಸಂಬಂಧದಲ್ಲಿ ಯಾವುದೇ ನ್ಯಾಯಾಲಯವು ಅಥವಾ ಇತರ ಪ್ರಾಧಿಕಾರವು ಯಾವುದೇ ನಿರ್ಬಂಧಕಾಜ್ಞೆಯನ್ನು ಮಂಜೂರು ಮಾಡತಕ್ಕದ್ದಲ್ಲ.

## ಅಧ್ಯಾಯ – IX

## ಇಂಧನಶಕ್ತಿ ಸಂರಕ್ಷಣಾ ಅಪೀಲು ನ್ಯಾಯಾಧಿಕರಣ

**30. ಅಪೀಲು ನ್ಯಾಯಾಧಿಕರಣದ ಸ್ಥಾಪನೆ.–** ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮೇರೆಗೆ ನ್ಯಾಯನಿರ್ಣಯ ಅಧಿಕಾರಿಯು ಅಥವಾ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಯಾವುದೇ ಇತರ ಪ್ರಾಧಿಕಾರವು ಮಾಡಿದ ಆದೇಶಗಳ ವಿರುದ್ಧದ ಅಪೀಲುಗಳನ್ನು ವಿಚಾರಣೆ ಮಾಡಲು ಇಂಧನಶಕ್ತಿ ಸಂರಕ್ಷಣಾ ಅಪೀಲು ನ್ಯಾಯಾಧಿಕರಣ ಎಂಬ ಹೆಸರಿನ ಒಂದು ಅಪೀಲು ನ್ಯಾಯಾಧಿಕರಣವನ್ನು ಸ್ಥಾಪಿಸತಕ್ಕದ್ದು.

**31. ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು.–** (1) ಈ ಅಧಿನಿಯಮದ ಮೇರೆಗೆ ನ್ಯಾಯ ನಿರ್ಣಯ ಅಧಿಕಾರಿಯು ಅಥವಾ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಯಾವುದೇ ಇತರ ಪ್ರಾಧಿಕಾರವು ಮಾಡಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ಇಂಧನಶಕ್ತಿ ಸಂರಕ್ಷಣಾ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲನ್ನು ಸಲ್ಲಿಸಬಹುದು:

ಪರಂತು, ನ್ಯಾಯನಿರ್ಣಯ ಅಧಿಕಾರಿಯು ದಂಡ ವಿಧಿಸಿ ಮಾಡಿದ ಯಾವುದೇ ಆದೇಶದ ವಿರುದ್ಧ ಅಪೀಲು ಸಲ್ಲಿಸುವ ಯಾರೇ ವ್ಯಕ್ತಿಯು, ಅಪೀಲು ಸಲ್ಲಿಸುವ ಸಂದರ್ಭದಲ್ಲಿ ಅಂಥ ದಂಡದ ಮೊಬಲಗನ್ನು ಠೇವಣಿ ಇಡತಕ್ಕದ್ದು:

ಮತ್ತೂ ಪರಂತು, ಯಾವುದೇ ನಿರ್ದಿಷ್ಟ ಸಂದರ್ಭದಲ್ಲಿ ಅಂಥ ದಂಡದ ಮೊತ್ತವನ್ನು ಠೇವಣಿಯಿಡುವುದರಿಂದ ಅಂಥ ವ್ಯಕ್ತಿಗೆ ತಕ್ಕದಲ್ಲದ ಕಷ್ಟವಾಗುವುದೆಂದು ಅಪೀಲು ನ್ಯಾಯಾಧಿಕರಣವು ಅಭಿಪ್ರಾಯಪಟ್ಟರೆ, ದಂಡದ ವಸೂಲಿಯು ಸುರಕ್ಷಿತವಾಗುವ ಹಾಗೆ ಅಪೀಲು ನ್ಯಾಯಾಧಿಕರಣವು ವಿಧಿಸಲು ಸೂಕ್ತವೆಂದು ಭಾವಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಅಂಥ ಠೇವಣಿ ಇಡುವುದನ್ನು ಬಿಟ್ಟುಬಿಡಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು ನ್ಯಾಯನಿರ್ಣಯ ಅಧಿಕಾರಿಯು ಅಥವಾ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಯಾವುದೇ ಇತರ ಪ್ರಾಧಿಕಾರವು ಮಾಡಿದ ಆದೇಶದ ಒಂದು ಪ್ರತಿಯನ್ನು ಬಾಧಿತನಾದ ಯಾರೇ ವ್ಯಕ್ತಿಯು ಸ್ವೀಕರಿಸಿದ ದಿನಾಂಕದಿಂದ ನಲವತ್ತೈದು ದಿನಗಳ ಅವಧಿಯೊಳಗೆ ದಾಖಲ್ಮಾಡತಕ್ಕದ್ದು ಮತ್ತು ಅದು ನಿಯಮಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು, ಅಂಥ ರೀತಿಯಲ್ಲಿ ಸತ್ಯಾಪನೆ ಮಾಡಿರತಕ್ಕದ್ದು ಮತ್ತು ಅಂಥ ಫೀಜಿನೊಂದಿಗೆ ಇರತಕ್ಕದ್ದು:

ಪರಂತು, ನಿಗದಿತ ಸಮಯದೊಳಗೆ ಅಪೀಲನ್ನು ದಾಖಲು ಮಾಡದೆ ಇರುವುದಕ್ಕೆ ಸಾಕಷ್ಟು ಕಾರಣಗಳಿದ್ದವೆಂದು ಅಪೀಲು ನ್ಯಾಯಾಧಿಕರಣಕ್ಕೆ ಮನದಟ್ಟಾದರೆ, ನಲವತ್ತೈದು ದಿನಗಳ ಸದರಿ ಅವಧಿಯು ಮುಕ್ತಾಯವಾದ ನಂತರವೂ ಅಪೀಲನ್ನು ಪುರಸ್ಕರಿಸಬಹುದು.

(3) (1)ನೇ ಉಪಪ್ರಕರಣದ ಮೇರೆಗೆ ಅಪೀಲನ್ನು ಸ್ವೀಕರಿಸಿದ ಮೇಲೆ, ಅಪೀಲು ನ್ಯಾಯಾಧಿಕರಣವು ಅಪೀಲಿನ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳುವ ಯುಕ್ತ ಅವಕಾಶವನ್ನು ನೀಡಿದ ನಂತರ, ಅದು ಸೂಕ್ತವೆಂದು ಭಾವಿಸಬಹುದಾದಂತೆ, ಯಾವ ಆದೇಶದ ವಿರುದ್ಧ ಅಪೀಲು ಮಾಡಲಾಗಿದೆಯೋ ಆ ಆದೇಶವನ್ನು ಸ್ಥಿರೀಕರಿಸುವ, ಮಾರ್ಪಾಟು ಮಾಡುವ ಅಥವಾ ರದ್ದುಗೊಳಿಸುವಂಥ ಆದೇಶಗಳನ್ನು ಅದರ ಮೇಲೆ ಮಾಡಬಹುದು.

(4) ಅಪೀಲು ನ್ಯಾಯಾಧಿಕರಣವು, ತಾನು ಮಾಡಿದ ಪ್ರತಿಯೊಂದು ಆದೇಶದ ಪ್ರತಿಯನ್ನು ಅಪೀಲಿನ ಪಕ್ಷಕಾರರಿಗೆ ಮತ್ತು ಸಂಬಂಧಪಟ್ಟ ನ್ಯಾಯನಿರ್ಣಯ ಅಧಿಕಾರಿಗೆ ಅಥವಾ ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಅಥವಾ ಯಾವುದೇ ಇತರ ಪ್ರಾಧಿಕಾರಕ್ಕೆ ಕಳಿಸತಕ್ಕದ್ದು.

(5) (1)ನೇ ಉಪಪ್ರಕರಣದ ಮೇರೆಗೆ ಅಪೀಲು ನ್ಯಾಯಾಧಿಕರಣದ ಮುಂದೆ ದಾಖಲು ಮಾಡಿದ ಅಪೀಲನ್ನು ಅದು ಸಾಧ್ಯವಾದಷ್ಟು ತ್ವರಿತವಾಗಿ ವಿಚಾರಣೆಗೆ ತೆಗೆದುಕೊಳ್ಳತಕ್ಕದ್ದು ಮತ್ತು ಅಪೀಲನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ನೂರ ಎಂಬತ್ತು ದಿನಗಳೊಳಗೆ ಅಪೀಲನ್ನು ಅಂತಿಮವಾಗಿ ವಿಲೆ ಮಾಡಲು ಅದು ಪ್ರಯತ್ನಿಸತಕ್ಕದ್ದು:

ಪರಂತು, ಒಂದು ನೂರ ಎಂಬತ್ತು ದಿನಗಳ ಸದರಿ ಅವಧಿಯೊಳಗೆ ಅಪೀಲನ್ನು ವಿಲೆ ಮಾಡಲಾಗದಿದ್ದರೆ, ಅಪೀಲು ನ್ಯಾಯಾಧಿಕರಣವು ಸದರಿ ಅವಧಿಯೊಳಗೆ ಅಪೀಲನ್ನು ವಿಲೆ ಮಾಡದಿರುವುದಕ್ಕಾಗಿ ತನ್ನ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.

(6) ಅಪೀಲು ನ್ಯಾಯಾಧಿಕರಣವು, ಯಾವುವೇ ವ್ಯವಹರಣೆಗಳ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ಸಂದರ್ಭಾನುಸಾರ, ನ್ಯಾಯನಿರ್ಣಯ ಅಧಿಕಾರಿಯು ಅಥವಾ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಯಾವುದೇ ಇತರ ಪ್ರಾಧಿಕಾರವು ಮಾಡಿದ ಯಾವುದೇ ಆದೇಶದ ಕಾನೂನುಸಮ್ಮತತೆಯನ್ನು, ಔಚಿತ್ಯವನ್ನು ಅಥವಾ ಸರಿತನವನ್ನು ಪರೀಕ್ಷಿಸುವ ಉದ್ದೇಶಕ್ಕಾಗಿ, ತಾನಾಗಿಯೇ ಅಥವಾ ಅನ್ಯಥಾ ಅಂಥ ವ್ಯವಹರಣೆಗಳ ದಾಖಲೆಗಳನ್ನು ತರಿಸಿಕೊಳ್ಳತಕ್ಕದ್ದು ಮತ್ತು ಆ ಪ್ರಕರಣದಲ್ಲಿ ಅದು ಸೂಕ್ತವೆಂದು ಭಾವಿಸುವಂತೆ ಅಂಥ ಆದೇಶವನ್ನು ಮಾಡತಕ್ಕದ್ದು.

**32. ಅಪೀಲು ನ್ಯಾಯಾಧಿಕರಣದ ರಚನೆ.–** (1) ಅಪೀಲು ನ್ಯಾಯಾಧಿಕರಣವು, ಒಬ್ಬ ಅಧ್ಯಕ್ಷನನ್ನು ಮತ್ತು ಕೇಂದ್ರ ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಂತೆ, ನಾಲ್ವರನ್ನು ಮೀರದಷ್ಟು ಸಂಖ್ಯೆಯ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು,–

(ಎ) ಅಪೀಲು ನ್ಯಾಯಾಧಿಕರಣದ ಅಧಿಕಾರ ವ್ಯಾಪ್ತಿಯನ್ನು ಅದರ ನ್ಯಾಯಪೀಠಗಳ ಮೂಲಕ ಚಲಾಯಿಸಬಹುದು;

(ಬಿ) ನ್ಯಾಯಪೀಠವು ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನು ಸೂಕ್ತವೆಂದು ಭಾವಿಸಬಹುದಾದ ಅಪೀಲು ನ್ಯಾಯಾಧಿಕರಣದ ಇಬ್ಬರು ಅಥವಾ ಹೆಚ್ಚು ಸದಸ್ಯರಿಂದ ಕೂಡಿದ ಒಂದು ನ್ಯಾಯಪೀಠವನ್ನು ರಚಿಸಬಹುದು:

ಪರಂತು, ಈ ಖಂಡದ ಮೇರೆಗೆ ರಚಿಸಲಾದ ಪ್ರತಿಯೊಂದು ನ್ಯಾಯಪೀಠವು ಕನಿಷ್ಠ ಒಬ್ಬ ನ್ಯಾಯಿಕ ಸದಸ್ಯನನ್ನು ಮತ್ತು ಒಬ್ಬ ತಾಂತ್ರಿಕ ಸದಸ್ಯನನ್ನು ಒಳಗೊಂಡಿರತಕ್ಕದ್ದು;

(ಸಿ) ಅಪೀಲು ನ್ಯಾಯಾಧಿಕರಣದ ನ್ಯಾಯಪೀಠಗಳು ಸಾಮಾನ್ಯವಾಗಿ ದೆಹಲಿಯಲ್ಲಿ ಮತ್ತು ಅಪೀಲು ನ್ಯಾಯಾಧಿಕರಣದ ಅಧ್ಯಕ್ಷರೊಡನೆ ಸಮಾಲೋಚಿಸಿ ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂಥ ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು;

(ಡಿ) ಕೇಂದ್ರ ಸರ್ಕಾರವು, ಅಪೀಲು ನ್ಯಾಯಾಧಿಕರಣದ ಪ್ರತಿಯೊಂದು ನ್ಯಾಯ ಪೀಠವು ಚಲಾಯಿಸಬಹುದಾದ ಅಧಿಕಾರ ವ್ಯಾಪ್ತಿಯ ಪ್ರದೇಶವನ್ನು ಅಧಿಸೂಚಿಸತಕ್ಕದ್ದು.

(3) (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನು ಅಪೀಲು ನ್ಯಾಯಾಧಿಕರಣದ ಸದಸ್ಯನನ್ನು ಒಂದು ನ್ಯಾಯಪೀಠದಿಂದ ಮತ್ತೊಂದು ನ್ಯಾಯಪೀಠಕ್ಕೆ ವರ್ಗಾಯಿಸಬಹುದು.

**ವಿವರಣೆ.**– ಈ ಅಧ್ಯಾಯದ ಉದ್ದೇಶಗಳಿಗಾಗಿ,–

(i) ನ್ಯಾಯಿಕ ಸದಸ್ಯ ಎಂದರೆ, 33ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ (i)ನೇ ಅಥವಾ (ii)ನೇ ಬಾಬಿನ ಮೇರೆಗೆ ನ್ಯಾಯಿಕ ಸದಸ್ಯನಾಗಿ ನೇಮಕಗೊಂಡ ಅಪೀಲು ನ್ಯಾಯಾಧಿಕರಣದ ಸದಸ್ಯ ಎಂದು ಅರ್ಥ ಮತ್ತು ಅದು ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನನ್ನೂ ಒಳಗೊಳ್ಳುತ್ತದೆ;

(ii) "ತಾಂತ್ರಿಕ ಸದಸ್ಯ" ಎಂದರೆ 33ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ (iii)ನೇ ಬಾಬು ಅಥವಾ (iv)ನೇ ಬಾಬು ಅಥವಾ (v)ನೇ ಬಾಬು ಅಥವಾ (vi)ನೇ ಬಾಬಿನ ಮೇರೆಗೆ ತಾಂತ್ರಿಕ ಸದಸ್ಯನಾಗಿ ನೇಮಕಗೊಂಡ ಅಪೀಲು ನ್ಯಾಯಾಧಿಕರಣದ ಸದಸ್ಯ.

**33. ಅಪೀಲು ನ್ಯಾಯಾಧಿಕರಣದ ಅಧ್ಯಕ್ಷ ಮತ್ತು ಸದಸ್ಯರ ನೇಮಕಕ್ಕೆ ಅರ್ಹತೆಗಳು.**– (1) ಒಬ್ಬ ವ್ಯಕ್ತಿಯು,–

(ಎ) ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ನ್ಯಾಯಾಧೀಶನಾಗಿದ್ದ ಅಥವಾ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿರುವ ಅಥವಾ ಆಗಿದ್ದ ಹೊರತು; ಮತ್ತು

(ಬಿ) ಅಪೀಲು ನ್ಯಾಯಾಧಿಕರಣದ ಸದಸ್ಯನ ಸಂದರ್ಭದಲ್ಲಿ,–

(i) ಉಚ್ಚನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಅಥವಾ ಆಗಲು ಅರ್ಹನಾಗಿರುವ ಹೊರತು; ಅಥವಾ

(ii) ಭಾರತದ ಕಾನೂನು ಸೇವೆಯ ಸದಸ್ಯನಾಗಿರುವ ಅಥವಾ ಸದಸ್ಯನಾಗಿದ್ದ ಮತ್ತು ಆ ಸೇವೆಯಲ್ಲಿ ಕನಿಷ್ಠ ಮೂರು ವರ್ಷಗಳವರೆಗೆ Iನೇ ದರ್ಜೆ ಹುದ್ದೆಯನ್ನು ಹೊಂದಿರುವ ಹೊರತು; ಅಥವಾ

(iii) ವಿದ್ಯುಚ್ಛಕ್ತಿ ಅಥವಾ ಕಲ್ಲಿದ್ದಲು ಅಥವಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಅಥವಾ ಪರಮಾಣು ಶಕ್ತಿ ಮಂತ್ರಾಲಯ ಅಥವಾ ಕೇಂದ್ರ ಸರ್ಕಾರದ ಇಲಾಖೆಯಲ್ಲಿ

ಕನಿಷ್ಠ ಒಂದು ವರ್ಷ ಕಾರ್ಯದರ್ಶಿಯಾಗಿರುವ ಅಥವಾ ಕಾರ್ಯದರ್ಶಿ ಆಗಿದ್ದ ಹೊರತು; ಅಥವಾ

(iv) ಕನಿಷ್ಠ ಒಂದು ವರ್ಷದವರೆಗೆ ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದ ಅಧ್ಯಕ್ಷನಾಗಿರುವ ಅಥವಾ ಅಧ್ಯಕ್ಷನಾಗಿದ್ದ ಹೊರತು; ಅಥವಾ

(v) ಕನಿಷ್ಠ ಮೂರು ವರ್ಷಗಳವರೆಗೆ ಬ್ಯೂರೋದ ಮಹಾನಿರ್ದೇಶಕನಾಗಿ ಅಥವಾ ಕೇಂದ್ರ ವಿದ್ಯುತ್ ಸಂಶೋಧನಾ ಬ್ಯೂರೋ ಅಥವಾ ಭಾರತೀಯ ಮಾನಕಗಳ ಬ್ಯೂರೋ ಮಹಾನಿರ್ದೇಶಕನಾಗಿರುವ ಅಥವಾ ಆಗಿದ್ದ ಅಥವಾ ಕನಿಷ್ಠ ಮೂರು ವರ್ಷಗಳವರೆಗೆ ಅದಕ್ಕೆ ಸಮನಾದ ಯಾವುದೇ ಹುದ್ದೆಯನ್ನು ಧಾರಣ ಮಾಡಿದ್ದ ಹೊರತು; ಅಥವಾ

(vi) ಇಂಧನಶಕ್ತಿ ಉತ್ಪಾದನೆ ಮತ್ತು ಸರಬರಾಜು, ಇಂಧನಶಕ್ತಿ ವ್ಯವಸ್ಥಾಪನೆ, ಪ್ರಮಾಣ ನಿಷ್ಕರ್ಷೆ ಮತ್ತು ಇಂಧನಶಕ್ತಿಯ ಸಮರ್ಥ ಬಳಕೆಗೆ ಹಾಗೂ ಅದರ ಸಂರಕ್ಷಣೆಗೆ ಸಂಬಂಧಿಸಿದ ವಿಷಯಗಳ ಕುರಿತು ವ್ಯವಹರಿಸುವಲ್ಲಿ ಸಾಕಷ್ಟು ಜ್ಞಾನ ಮತ್ತು ಅನುಭವವನ್ನು ಹೊಂದಿರುವ ಅಥವಾ ಹೊಂದಿದ್ದ ಅರ್ಹ ತಾಂತ್ರಿಕ ವ್ಯಕ್ತಿ ಅಥವಾ ಸಮರ್ಥ ಮತ್ತು ತಜ್ಞ ವ್ಯಕ್ತಿಯಾಗಿರುವ ಅಥವಾ ಆಗಿದ್ದ ಮತ್ತು ಇಂಜಿನಿಯರಿಂಗ್, ಹಣಕಾಸು, ವಾಣಿಜ್ಯ, ಅರ್ಥಶಾಸ್ತ್ರ, ಕಾನೂನು ಅಥವಾ ವ್ಯವಸ್ಥಾಪನೆಗೆ ಸಂಬಂಧಿಸಿದ ಸಮಸ್ಯೆಗಳೊಂದಿಗೆ ವ್ಯವಹರಿಸುವಲ್ಲಿ ಸಾಮರ್ಥ್ಯವನ್ನು ತೋರಿಸಿದ ಹೊರತು

– ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನಾಗಿ ಅಥವಾ ಅಪೀಲು ನ್ಯಾಯಾಧಿಕರಣದ ಸದಸ್ಯನಾಗಿ ನೇಮಕಗೊಳ್ಳಲು ಅರ್ಹನಾಗಿರತಕ್ಕದ್ದಲ್ಲ.

**34. ಪದಾವಧಿ.–** ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನು ಹಾಗೂ ಅಪೀಲು ನ್ಯಾಯಾಧಿಕರಣದ ಪ್ರತಿಯೊಬ್ಬ ಸದಸ್ಯನು ತನ್ನ ಪದಸ್ವೀಕಾರ ಮಾಡಿದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಹಾಗೆ ಪದಧಾರಣ ಮಾಡತಕ್ಕದ್ದು:

ಪರಂತು, ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನು ಅಥವಾ ಅಪೀಲು ನ್ಯಾಯಾಧಿಕರಣದ ಸದಸ್ಯನು,–

(ಎ) ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನ ಸಂದರ್ಭದಲ್ಲಿ ಅವನಿಗೆ ಎಪ್ಪತ್ತು ವರ್ಷ ವಯಸ್ಸು ತುಂಬಿದ ನಂತರ;

(ಬಿ) ಅಪೀಲು ನ್ಯಾಯಾಧಿಕರಣದ ಯಾರೇ ಸದಸ್ಯನ ಸಂದರ್ಭದಲ್ಲಿ ಅವನಿಗೆ ಅರವತ್ತೈದು ವರ್ಷ ವಯಸ್ಸು ತುಂಬಿದ ನಂತರ

– ಹಾಗೆ ಪದಧಾರಣ ಮಾಡತಕ್ಕದ್ದಲ್ಲ.

**35. ಸೇವಾ ನಿಬಂಧನೆಗಳು ಮತ್ತು ಷರತ್ತುಗಳು.–** ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನಿಗೆ ಹಾಗೂ ಅಪೀಲು ನ್ಯಾಯಾಧಿಕರಣದ ಸದಸ್ಯರಿಗೆ ಸಂದಾಯವಾಗುವ ಸಂಬಳ ಮತ್ತು ಭತ್ಯೆಗಳು ಹಾಗೂ ಇತರ ಸೇವಾ ನಿಬಂಧನೆಗಳು ಹಾಗೂ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನ ಅಥವಾ ಅಪೀಲು ನ್ಯಾಯಾಧಿಕರಣದ ಸದಸ್ಯನ ಸಂಬಳವನ್ನಾಗಲಿ ಮತ್ತು ಭತ್ಯಗಳನ್ನಾಗಲಿ ಅಥವಾ ಇತರ ಸೇವಾ ನಿಬಂಧನೆಗಳನ್ನಾಗಲಿ ಅಥವಾ ಷರತ್ತುಗಳನ್ನಾಗಲಿ ನೇಮಕದ ನಂತರ ಅವನಿಗೆ ಅನಾನುಕೂಲವಾಗುವಂತೆ ವ್ಯತ್ಯಾಸಗೊಳಿಸತಕ್ಕದ್ದಲ್ಲ.

**36. ಖಾಲಿಸ್ಥಾನಗಳು.–** ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನ ಅಥವಾ ಅಪೀಲು ನ್ಯಾಯಾಧಿಕರಣದ ಸದಸ್ಯನ ಪದವು ತಾತ್ಕಾಲಿಕ ಗೈರುಹಾಜರಿಯನ್ನು ಹೊರತುಪಡಿಸಿ, ಯಾವುದೇ ಕಾರಣಕ್ಕಾಗಿ ಖಾಲಿಯಾದರೆ ಕೇಂದ್ರ ಸರ್ಕಾರವು, ಆ ಖಾಲಿಸ್ಥಾನವನ್ನು ತುಂಬಲು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಯಾರೇ ಇನ್ನೊಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು ಮತ್ತು ಖಾಲಿಸ್ಥಾನವನ್ನು ತುಂಬಿದ ಹಂತದಿಂದ ಅಪೀಲು ನ್ಯಾಯಾಧಿಕರಣದ ಮುಂದಿರುವ ವ್ಯವಹರಣೆಗಳನ್ನು ಮುಂದುವರೆಸಬಹುದು.

**37. ರಾಜೀನಾಮೆ ಮತ್ತು ತೆಗೆದುಹಾಕುವುದು.–** (1) ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನು ಅಥವಾ ಸದಸ್ಯನು ತಾನು ರುಜು ಮಾಡಿ ಕೇಂದ್ರ ಸರ್ಕಾರಕ್ಕೆ ಲಿಖಿತ ನೋಟೀಸನ್ನು ನೀಡುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು:

ಪರಂತು, ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನು ಅಥವಾ ಅಪೀಲು ನ್ಯಾಯಾಧಿಕರಣದ ಸದಸ್ಯನು, ಶೀಘ್ರವಾಗಿ ತನ್ನ ಪದವನ್ನು ಬಿಟ್ಟುಕೊಡಲು ಅವನು ಕೇಂದ್ರ ಸರ್ಕಾರದಿಂದ ಅನುಮತಿ ಪಡೆದ ಹೊರತು, ಅಂಥ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳು ಮುಗಿಯುವವರೆಗೆ ಅಥವಾ ತನ್ನ ಪದಕ್ಕೆ ಉತ್ತರಾಧಿಕಾರಿಯಾಗಿ ನೇಮಕಗೊಂಡ ಒಬ್ಬ ವ್ಯಕ್ತಿಯು ಅವನ ಪದ ವಹಿಸಿಕೊಳ್ಳುವವರೆಗೆ ಅಥವಾ ತನ್ನ ಪದದ ಅವಧಿಯು ಮುಗಿಯುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದದಲ್ಲಿ ಮುಂದುವರಿಯತಕ್ಕದ್ದು.

(2) ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನನ್ನು ಅಥವಾ ಅಪೀಲು ನ್ಯಾಯಾಧಿಕರಣದ ಸದಸ್ಯನನ್ನು, ಅವನ ವಿರುದ್ಧ ಮಾಡಿರುವ ಆಪಾದನೆಗಳ ಬಗ್ಗೆ ಅಂಥ ನ್ಯಾಯಾಧಿಕರಣದ ಅಧ್ಯಕ್ಷನಿಗೆ ಅಥವಾ ಸದಸ್ಯನಿಗೆ ತಿಳಿಸಿ, ಅಂಥ ಆಪಾದನೆಗಳ ಸಂಬಂಧದಲ್ಲಿ ಆತನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಯುಕ್ತ ಅವಕಾಶವನ್ನು ನೀಡಿದ ನಂತರ ಈ ಉದ್ದೇಶಕ್ಕಾಗಿ ರಾಷ್ಟ್ರಪತಿಯವರು ನೇಮಕ ಮಾಡಬಹುದಾದಂಥ ವ್ಯಕ್ತಿಯು ಒಂದು ವಿಚಾರಣೆಯನ್ನು ಮಾಡಿದ ನಂತರ ರುಜುವಾತಾದ ದುರ್ನಡತೆ ಅಥವಾ ಅಸಮರ್ಥತೆಯ ಕಾರಣಗಳ ಮೇಲೆ, ಕೇಂದ್ರ ಸರ್ಕಾರದ ಒಂದು ಆದೇಶದ ಮೂಲಕವಲ್ಲದೇ ಅವನ ಪದದಿಂದ ತೆಗೆದುಹಾಕತಕ್ಕದ್ದಲ್ಲ.

**38. ಕೆಲವು ಸಂದರ್ಭಗಳಲ್ಲಿ ಸದಸ್ಯನು ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವುದು.–** (1) ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನ ಪದವು ಅವನ ಮರಣ, ರಾಜೀನಾಮೆ ಅಥವಾ ಬೇರೆ ರೀತಿಯ ಕಾರಣಗಳಿಂದ ಖಾಲಿಯಾದ ಸಂದರ್ಭದಲ್ಲಿ, ಅಂಥ ಖಾಲಿಸ್ಥಾನವನ್ನು ತುಂಬಲು ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಹೊಸ ಅಧ್ಯಕ್ಷನು ತನ್ನ ಪದಕ್ಕೆ ನೇಮಕವಾಗಿ ಪದಧಾರಣ ಮಾಡುವವರೆಗೆ ಅಪೀಲು ನ್ಯಾಯಾಧಿಕರಣದ ಅತ್ಯಂತ ಹಿರಿಯ ಸದಸ್ಯನು, ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನಾಗಿ ಕಾರ್ಯನಿರ್ವಹಿಸತಕ್ಕದ್ದು.

(2) ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನು, ಗೈರುಹಾಜರಿ, ಅಸ್ವಸ್ಥತೆ ಅಥವಾ ಯಾವುದೇ ಇತರ ಕಾರಣದಿಂದ ತನ್ನ ಕಾರ್ಯಗಳನ್ನು ನಿರ್ವಹಿಸಲು ಅಸಮರ್ಥನಾದಾಗ, ಅಪೀಲು ನ್ಯಾಯಾಧಿಕರಣದ ಅತ್ಯಂತ ಹಿರಿಯ ಸದಸ್ಯನು, ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನು ತನ್ನ ಕರ್ತವ್ಯಗಳನ್ನು ಪುನಃ ವಹಿಸಿಕೊಳ್ಳುವ ದಿನಾಂಕದವರೆಗೆ, ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

**39. ಅಪೀಲು ನ್ಯಾಯಾಧಿಕರಣದ ಸಿಬ್ಬಂದಿ.–** (1) ಕೇಂದ್ರ ಸರ್ಕಾರವು ತಾನು ಸೂಕ್ತವೆಂದು ಭಾವಿಸಬಹುದಾದಂಥ ಅಧಿಕಾರಿಗಳು ಮತ್ತು ನೌಕರರನ್ನು ಅಪೀಲು ನ್ಯಾಯಾಧಿಕರಣಕ್ಕೆ ಒದಗಿಸತಕ್ಕದ್ದು.

(2) ಸಂದರ್ಭಾನುಸಾರ, ಅಪೀಲು ನ್ಯಾಯಾಧಿಕರಣದ ಅಧಿಕಾರಿಗಳು ಮತ್ತು ನೌಕರರು ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನ ಸಾಮಾನ್ಯ ಮೇಲ್ವಿಚಾರಣೆಯ ಮೇರೆಗೆ, ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(3) ಅಪೀಲು ನ್ಯಾಯಾಧಿಕರಣದ ಅಧಿಕಾರಿಗಳ ಮತ್ತು ನೌಕರರ ಸಂಬಳ ಮತ್ತು ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**40. ಅಪೀಲು ನ್ಯಾಯಾಧಿಕರಣದ ಪ್ರಕ್ರಿಯೆ ಮತ್ತು ಅಧಿಕಾರಗಳು.–** (1) ಅಪೀಲು ನ್ಯಾಯಾಧಿಕರಣವು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರಲ್ಲಿ (1908ರ 5) ವಿಧಿಸಲಾದ ಪ್ರಕ್ರಿಯೆಗೆ ಬದ್ಧವಾಗಿರತಕ್ಕದ್ದಲ್ಲ. ಆದರೆ ಸ್ವಾಭಾವಿಕ ನ್ಯಾಯದ ತತ್ವಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು ಮತ್ತು ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಅಪೀಲು ನ್ಯಾಯಾಧಿಕರಣವು ತನ್ನದೇ ಆದ ಪ್ರಕ್ರಿಯೆಯನ್ನು ವಿನಿಯಮಿಸಲು ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಅಪೀಲು ನ್ಯಾಯಾಧಿಕರಣವು, ಈ ಅಧಿನಿಯಮದ ಮೇರೆಗೆ, ಅದರ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಗಳಿಗಾಗಿ, ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದ ದಾವೆಯನ್ನು ಅಧಿವಿಚಾರಣೆ ಮಾಡುವಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(ಎ) ಯಾರೇ ವ್ಯಕ್ತಿಯ ಹಾಜರಾತಿಗೆ ಸಮನು ನೀಡುವುದು ಮತ್ತು ಹಾಜರಾತಿಗೆ ಒತ್ತಾಯಿಸುವುದು ಮತ್ತು ಪ್ರಮಾಣಮಾಡಿಸಿ ಅವನನ್ನು ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳನ್ನು ಶೋಧಿಸಬೇಕೆಂದು ಮತ್ತು ಹಾಜರುಪಡಿಸಬೇಕೆಂದು ಅಗತ್ಯಪಡಿಸುವುದು;

(ಸಿ) ಅಫಿಡಾವಿಟ್ಟುಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಭಾರತ ಸಾಕ್ಷ್ಯ ಅಧಿನಿಯಮ, 1872ರ 123 ಮತ್ತು 124ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಯಾವುದೇ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ದಸ್ತಾವೇಜನ್ನು ಅಥವಾ ಅಂಥ ದಾಖಲೆಯ ಅಥವಾ ದಸ್ತಾವೇಜಿನ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿದಾರರನ್ನು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸುವುದಕ್ಕಾಗಿ ಕಮಿಷನುಗಳನ್ನು ಹೊರಡಿಸುವುದು;

(ಎಫ್) ತನ್ನ ತೀರ್ಮಾನಗಳನ್ನು ಪುನರವಲೋಕಿಸುವುದು;

(ಜಿ) ಹಾಜರಾಗಲು ತಪ್ಪಿದುದರ ಬಗೆಗಿನ ಮನವಿಯನ್ನು ಏಕಪಕ್ಷೀಯವಾಗಿ ವಜಾಮಾಡುವುದು ಅಥವಾ ಅದನ್ನು ತೀರ್ಮಾನಿಸುವುದು;

(ಹೆಚ್) ಏಕಪಕ್ಷೀಯವಾಗಿ ಮಾಡಿದ ಯಾವುದೇ ವಜಾ ಆದೇಶವನ್ನು ಅಥವಾ ಹಾಜರಾಗಲು ತಪ್ಪಿದುದರ ಬಗೆಗಿನ ಯಾವುದೇ ಮನವಿಯನ್ನು ಅಥವಾ ತಾನು ಮಾಡಿದ ಆದೇಶವನ್ನು ರದ್ದುಗೊಳಿಸುವುದು;

(ಐ) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಇತರ ಯಾವುದೇ ವಿಷಯ.

(3) ಈ ಅಧಿನಿಯಮದ ಮೇರೆಗೆ ಅಪೀಲು ನ್ಯಾಯಾಧಿಕರಣವು ಮಾಡಿದ ಆದೇಶವನ್ನು ಸಿವಿಲ್ ನ್ಯಾಯಾಲಯದ ಡಿಕ್ರಿಯಂತೆ ಅಪೀಲು ನ್ಯಾಯಾಧಿಕರಣವು ಜಾರಿಗೊಳಿಸುವಂಥದ್ದಾಗಿರತಕ್ಕದ್ದು. ಈ ಉದ್ದೇಶಕ್ಕಾಗಿ ಅಪೀಲು ನ್ಯಾಯಾಧಿಕರಣವು ಒಂದು ಸಿವಿಲ್ ನ್ಯಾಯಾಲಯದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(4) (3)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಅಪೀಲು ನ್ಯಾಯಾಧಿಕರಣವು ತಾನು ಮಾಡಿದ ಆದೇಶವನ್ನು ಸ್ಥಳೀಯ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಿವಿಲ್ ನ್ಯಾಯಾಲಯಕ್ಕೆ ರವಾನಿಸಬಹುದು ಮತ್ತು ಅಂಥ ಸಿವಿಲ್ ನ್ಯಾಯಾಲಯವು ಆ ಆದೇಶವನ್ನು ಆ ನ್ಯಾಯಾಲಯವು ಮಾಡಿರುವ ಡಿಕ್ರಿ ಎಂಬಂತೆ ಜಾರಿಗೊಳಿಸತಕ್ಕದ್ದು.

(5) ಅಪೀಲು ನ್ಯಾಯಾಧಿಕರಣದ ಮುಂದಿರುವ ಎಲ್ಲಾ ವ್ಯವಹರಣೆಗಳನ್ನು ಭಾರತ ದಂಡ ಸಂಹಿತೆಯ 192 ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಗಳೆಂಬುದಾಗಿ ಭಾವಿಸತಕ್ಕದ್ದು ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 345ನೇ ಮತ್ತು 346ನೇ ಪ್ರಕರಣಗಳ ಉದ್ದೇಶಗಳಿಗಾಗಿ ಅಪೀಲು ನ್ಯಾಯಾಧಿಕರಣವನ್ನು ಸಿವಿಲ್ ನ್ಯಾಯಾಲಯ ಎಂಬುದಾಗಿ ಭಾವಿಸತಕ್ಕದ್ದು.

**41. ನ್ಯಾಯಪೀಠಗಳಿಗೆ ವ್ಯವಹಾರಗಳ ಹಂಚಿಕೆ.–** ನ್ಯಾಯಪೀಠಗಳು ರಚನೆಯಾಗಿರುವಲ್ಲಿ, ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನು, ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ನ್ಯಾಯಪೀಠಗಳಿಗೆ ಅಪೀಲು ನ್ಯಾಯಾಧಿಕರಣದ ವ್ಯವಹಾರದ ಹಂಚಿಕೆಗೆ ಸಂಬಂಧಿಸಿದಂತೆ ಉಪಬಂಧಗಳನ್ನು ಮಾಡಬಹುದು ಮತ್ತು ಪ್ರತಿಯೊಂದು ನ್ಯಾಯಪೀಠವು ವ್ಯವಹರಿಸಬಹುದಾದ ವಿಷಯಗಳ ಬಗ್ಗೆ ಸಹ ಉಪಬಂಧಿಸಬಹುದು.

**42. ಪ್ರಕರಣಗಳನ್ನು ವರ್ಗಾವಣೆ ಮಾಡಲು ಅಧ್ಯಕ್ಷನ ಅಧಿಕಾರ.–** ಯಾರೇ ಪಕ್ಷಕಾರರು ಸಲ್ಲಿಸಿದ ಅರ್ಜಿಯ ಮೇಲೆ ಹಾಗೂ ಪಕ್ಷಕಾರರಿಗೆ ನೋಟೀಸ್ ನೀಡಿದ ನಂತರ ಮತ್ತು ಯಾರ ಅಹವಾಲನ್ನು ಕೇಳಲು ಅವನು ಇಚ್ಛಿಸುವನೋ ಅಂಥವರ ಅಹವಾಲನ್ನು ಕೇಳಿದ ನಂತರ ಅಥವಾ ಅಂಥ ನೋಟೀಸು ನೀಡದೆ ಸ್ವಯಿಚ್ಛೆಯಿಂದ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನು ಒಂದು ನ್ಯಾಯಪೀಠದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಪ್ರಕರಣವನ್ನು ವಿಲೆ ಮಾಡುವುದಕ್ಕಾಗಿ ಇತರ ಯಾವುದೇ ನ್ಯಾಯಪೀಠಕ್ಕೆ ವರ್ಗಾಯಿಸಬಹುದು.

**43. ಬಹುಮತದಿಂದ ತೀರ್ಮಾನ.–** ಇಬ್ಬರು ಸದಸ್ಯರನ್ನು ಒಳಗೊಂಡಿರುವ ನ್ಯಾಯಪೀಠದ ಅಪೀಲು ನ್ಯಾಯಾಧಿಕರಣದ ಸದಸ್ಯರು, ಯಾವುದೇ ವಿಷಯದಲ್ಲಿ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದರೆ, ಅವರು ಯಾವ ವಿಷಯ ಅಥವಾ ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದರೆಂಬುದನ್ನು ತಿಳಿಸತಕ್ಕದ್ದು ಮತ್ತು ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನಿಗೆ ಆ ಬಗ್ಗೆ ಉಲ್ಲೇಖವನ್ನು ಮಾಡತಕ್ಕದ್ದು, ಆತನು ವಿಷಯ ಅಥವಾ ವಿಷಯಗಳನ್ನು ಸ್ವತಃ ವಿಚಾರಣೆ ಮಾಡಬಹುದು ಅಥವಾ ಅಪೀಲು ನ್ಯಾಯಾಧಿಕರಣದ ಇತರ ಒಬ್ಬ ಸದಸ್ಯ ಅಥವಾ ಹೆಚ್ಚಿನ ಸದಸ್ಯರು ಅಂಥ ವಿಷಯ ಅಥವಾ ವಿಷಯಗಳನ್ನು ವಿಚಾರಣೆ ಮಾಡಲು ಆ ಪ್ರಕರಣವನ್ನು ಅವರಿಗೆ ಉಲ್ಲೇಖಿಸತಕ್ಕದ್ದು ಮತ್ತು ಅಂಥ ವಿಷಯ ಅಥವಾ ವಿಷಯಗಳನ್ನು ಮೊದಲು ವಿಚಾರಣೆ ನಡೆಸಿದವರೂ ಒಳಗೊಂಡಂತೆ ಪ್ರಕರಣದ ವಿಚಾರಣೆ ಮಾಡಿದ ಅಪೀಲು ನ್ಯಾಯಾಧಿಕರಣದ ಸದಸ್ಯರ ಬಹುಮತದ ಅಭಿಪ್ರಾಯದ ಅನುಸಾರ ತೀರ್ಮಾನಿಸತಕ್ಕದ್ದು.

**44. ನ್ಯಾಯವಾದಿಯ ಅಥವಾ ಅಂಗೀಕೃತ ಸಂಪರೀಕ್ಷಕನ ನೆರವನ್ನು ತೆಗೆದುಕೊಳ್ಳಲು ಅಪೀಲುದಾರನ ಹಕ್ಕು ಮತ್ತು ಮಂಡನಾಧಿಕಾರಿಗಳನ್ನು ನೇಮಕ ಮಾಡಲು ಸರ್ಕಾರದ ಹಕ್ಕು.–** (1) ಈ ಅಧಿನಿಯಮದ ಮೇರೆಗೆ ಅಪೀಲು

ನ್ಯಾಯಾಧಿಕರಣಕ್ಕೆ ಅಪೀಲನ್ನು ಸಲ್ಲಿಸುವ ವ್ಯಕ್ತಿಯು ಅಪೀಲು ನ್ಯಾಯಾಧಿಕರಣದ ಮುಂದೆ ತನ್ನ ಪ್ರಕರಣವನ್ನು ಮಂಡಿಸಲು ಸಂದರ್ಭಾನುಸಾರ ಖುದ್ದಾಗಿಯಾಗಲಿ ಅಥವಾ ನ್ಯಾಯವಾದಿಯ ನೆರವನ್ನು ತೆಗೆದುಕೊಂಡಾಗಲಿ ಅಥವಾ ತನ್ನ ಆಯ್ಕೆಯ ಅಂಗೀಕೃತ ಇಂಧನಶಕ್ತಿ ಸಂಪರೀಕ್ಷಕನ ಮೂಲಕವಾಗಲಿ ಹಾಜರಾಗಬಹುದು.

(2) ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು, ಒಬ್ಬರು ಅಥವಾ ಹೆಚ್ಚು ನ್ಯಾಯವಾದಿಗಳನ್ನು ಅಥವಾ ತನ್ನ ಯಾರೇ ಅಧಿಕಾರಿಗಳನ್ನು ಮಂಡನಾಧಿಕಾರಿಯಾಗಿ ಕಾರ್ಯನಿರ್ವಹಿಸಲು ಅಧಿಕಾರ ನೀಡಬಹುದು ಮತ್ತು ಆ ರೀತಿ ಅಧಿಕಾರ ಪಡೆದ ಪ್ರತಿಯೊಬ್ಬ ವ್ಯಕ್ತಿಯು ಸಂದರ್ಭಾನುಸಾರ ಅಪೀಲು ನ್ಯಾಯಾಧಿಕರಣದ ಮುಂದೆ ಯಾವುದೇ ಅಪೀಲಿನ ಸಂದರ್ಭದಲ್ಲಿ ಪ್ರಕರಣವನ್ನು ಮಂಡಿಸಬಹುದು.

**45. ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲು.–** ಅಪೀಲು ನ್ಯಾಯಾಧಿಕರಣದ ಯಾವುದೇ ತೀರ್ಮಾನದಿಂದ ಅಥವಾ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5) 100ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಒಂದು ಅಥವಾ ಹೆಚ್ಚಿನ ಆಧಾರಗಳ ಮೇಲೆ ಅಪೀಲು ನ್ಯಾಯಾಧಿಕರಣದ ತೀರ್ಮಾನ ಅಥವಾ ಆದೇಶವನ್ನು ತನಗೆ ತಿಳಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಬಹುದು:

ಪರಂತು, ಸದರಿ ಅವಧಿಯೊಳಗೆ ಅಪೀಲನ್ನು ಸಲ್ಲಿಸುವಲ್ಲಿ ಅಪೀಲುದಾರನಿಗೆ ಸಾಕಷ್ಟು ಕಾರಣಗಳಿಂದಾಗಿ ತಡೆಯುಂಟಾಗಿತ್ತೆಂದು ಸರ್ವೋಚ್ಚ ನ್ಯಾಯಾಲಯಕ್ಕೆ ಮನದಟ್ಟಾದರೆ, ಅರವತ್ತು ದಿನಗಳಿಗೆ ಮೀರದ ಹೆಚ್ಚಿನ ಅವಧಿಯೊಳಗೆ ಅದನ್ನು ಸಲ್ಲಿಸಲು ಅನುಮತಿಸಬಹುದು.

## ಅಧ್ಯಾಯ – X
## ಸಂಕೀರ್ಣ

**46. ಬ್ಯೂರೋಗೆ ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದ ಹಿಂದೆ ಹೇಳಿದ ಉಪಬಂಧಗಳಿಗೆ ಬಾಧಕವಾಗದಂತೆ, ಬ್ಯೂರೋ, ಈ ಅಧಿನಿಯಮದ ಮೇರೆಗೆ ಅದರ ಅಧಿಕಾರಗಳನ್ನು ಚಲಾಯಿಸುವಲ್ಲಿ ಅಥವಾ ಅದರ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ, ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಲಿಖಿತದಲ್ಲಿ ಅದಕ್ಕೆ ನೀಡಬಹುದಾದಂಥ ಕಾರ್ಯನೀತಿಯ ಪ್ರಶ್ನೆಗಳಿಗೆ ಸಂಬಂಧಿಸಿದ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು:

ಪರಂತು, ಕಾರ್ಯಸಾಧ್ಯವಾದಷ್ಟುಮಟ್ಟಿಗೆ, ಈ ಉಪಪ್ರಕರಣದ ಮೇರೆಗೆ ಯಾವುದೇ ನಿರ್ದೇಶನವನ್ನು ನೀಡುವ ಮುಂಚೆ ಬ್ಯೂರೋವು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅದಕ್ಕೆ ಅವಕಾಶವನ್ನು ನೀಡತಕ್ಕದ್ದು.

(2) ಒಂದು ಪ್ರಶ್ನೆಯು ಕಾರ್ಯನೀತಿಗೆ ಸಂಬಂಧಿಸಿದ್ದೇ ಅಥವಾ ಅಲ್ಲವೇ ಎಂಬ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**47. ಬ್ಯೂರೋವನ್ನು ರದ್ದುಗೊಳಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು ಯಾವುದೇ ಸಮಯದಲ್ಲಿ,–

(ಎ) ಗಂಭೀರ ತುರ್ತುಪರಿಸ್ಥಿತಿಯಿಂದಾಗಿ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅದರ ಮೇರೆಗೆ ವಿಧಿಸಲಾದ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಬ್ಯೂರೋ ಅಸಮರ್ಥವಾಗಿದೆಯೆಂದು; ಅಥವಾ

(ಬಿ) ಬ್ಯೂರೋ ಈ ಅಧಿನಿಯಮದ ಮೇರೆಗೆ, ಕೇಂದ್ರ ಸರ್ಕಾರವು ನೀಡಿದ ನಿರ್ದೇಶನಗಳನ್ನು ಪಾಲಿಸುವಲ್ಲಿ ಅಥವಾ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಅದಕ್ಕೆ ವಿಧಿಸಲಾದ ಪ್ರಕಾರ್ಯಗಳು ಮತ್ತು ಕರ್ತವ್ಯಗಳ ನಿರ್ವಹಣೆಯಲ್ಲಿ ನಿರಂತರವಾಗಿ ಕರ್ತವ್ಯಲೋಪ ಮಾಡಿದೆಯೆಂದು ಮತ್ತು ಅಂಥ ಕರ್ತವ್ಯಲೋಪದ ಪರಿಣಾಮವಾಗಿ, ಬ್ಯೂರೋದ ಹಣಕಾಸಿನ ಸ್ಥಿತಿಯು ಕ್ಷೀಣಿಸಿದೆಯೆಂದು ಅಥವಾ ಬ್ಯೂರೋದ ಆಡಳಿತವು ಅವನತಿ ಹೊಂದಿದೆಯೆಂದು; ಅಥವಾ

(ಸಿ) ಸಾರ್ವಜನಿಕ ಹಿತಾಸಕ್ತಿಯಲ್ಲಿ ಅದನ್ನು ರದ್ದುಗೊಳಿಸುವುದು ಅವಶ್ಯಕಗೊಳಿಸುವಂಥ ಸಂದರ್ಭಗಳು ಇದೆಯೆಂದು

– ಅಭಿಪ್ರಾಯಪಟ್ಟರೆ, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಆರು ತಿಂಗಳುಗಳಿಗೆ ಮೀರದ ಅವಧಿಗಾಗಿ ಬ್ಯೂರೋವನ್ನು ರದ್ದುಗೊಳಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಬ್ಯೂರೋವನ್ನು ರದ್ದುಗೊಳಿಸುವ ಅಧಿಸೂಚನೆಯನ್ನು ಪ್ರಕಟಿಸಿದ ಮೇಲೆ,-

(ಎ) 4ನೇ ಪ್ರಕರಣದ (2)ನೇ ಉಪಪ್ರಕರಣದ (ಓ), (ಪಿ) ಮತ್ತು (ಕ್ಯೂ) ಖಂಡಗಳಲ್ಲಿ ಉಲ್ಲೇಖಿಸಿದ ಎಲ್ಲಾ ಸದಸ್ಯರು, ರದ್ದಿಯಾತಿಯ ದಿನಾಂಕದಿಂದ, ಸದಸ್ಯರಾಗಿದ್ದ ತಮ್ಮ ಪದಗಳನ್ನು ತೆರವುಗೊಳಿಸತಕ್ಕದ್ದು;

(ಬಿ) ಬ್ಯೂರೋದ ಮೂಲಕ ಅಥವಾ ಪರವಾಗಿ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಚಲಾಯಿಸತಕ್ಕ ಅಥವಾ ನಿರ್ವಹಿಸತಕ್ಕ ಎಲ್ಲಾ ಅಧಿಕಾರಗಳನ್ನು, ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು (3)ನೇ ಉಪಪ್ರಕರಣದ ಮೇರೆಗೆ ಬ್ಯೂರೋವನ್ನು ಪುನರ್‌ರಚಿಸುವವರೆಗೆ ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು; ಮತ್ತು

(ಸಿ) ಬ್ಯೂರೋದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಎಲ್ಲಾ ಸ್ವತ್ತುಗಳು (3)ನೇ ಉಪಪ್ರಕರಣದ ಮೇರೆಗೆ ಬ್ಯೂರೋವನ್ನು ಪುನರ್‌ರಚಿಸುವವರೆಗೂ, ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರದ್ದಿಯಾತಿ ಅವಧಿಯು ಮುಕ್ತಾಯಗೊಂಡ ಮೇಲೆ, ಕೇಂದ್ರ ಸರ್ಕಾರವು ಹೊಸ ನೇಮಕದ ಮೂಲಕ ಬ್ಯೂರೋವನ್ನು ಪುನರ್‌ರಚಿಸಬಹುದು ಮತ್ತು ಅಂಥ ಸಂದರ್ಭದಲ್ಲಿ (2)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ತಮ್ಮ ಪದವನ್ನು/ ಪದಗಳನ್ನು ತೆರವು ಮಾಡಿದ ಯಾರೇ ವ್ಯಕ್ತಿಯು ಅಥವಾ ವ್ಯಕ್ತಿಗಳು ನೇಮಕಕ್ಕೆ ಅನರ್ಹರು ಎಂದು ಭಾವಿಸತಕ್ಕದ್ದಲ್ಲ:

ಪರಂತು, ಕೇಂದ್ರ ಸರ್ಕಾರವು, ರದ್ದಿಯಾತಿಯ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ಈ ಉಪಪ್ರಕರಣದ ಮೇರೆಗೆ ಕ್ರಮವನ್ನು ತೆಗೆದುಕೊಳ್ಳಬಹುದು.

(4) ಕೇಂದ್ರ ಸರ್ಕಾರವು (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹಾಗೂ ಈ ಪ್ರಕರಣದ ಮೇರೆಗೆ ತೆಗೆದುಕೊಂಡ ಯಾವುದೇ ಕ್ರಮದ ಮತ್ತು ಅಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಕಾರಣವಾದ

ಪರಿಸ್ಥಿತಿಯ ಪೂರ್ಣ ವರದಿಯನ್ನು ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

**48. ಕಂಪನಿಗಳಿಂದ ಕರ್ತವ್ಯಲೋಪ.–** (1) ಕಂಪನಿಯು 14ನೇ ಪ್ರಕರಣದ (ಸಿ) ಖಂಡ ಅಥವಾ (ಡಿ) ಖಂಡ ಅಥವಾ (ಹೆಚ್) ಖಂಡ ಅಥವಾ (ಐ) ಖಂಡ ಅಥವಾ (ಕೆ) ಖಂಡ ಅಥವಾ (ಎಲ್) ಖಂಡ ಅಥವಾ (ಎನ್) ಖಂಡ ಅಥವಾ (ಆರ್) ಖಂಡ ಅಥವಾ (ಎಸ್) ಖಂಡಗಳ ಅಥವಾ 15ನೇ ಪ್ರಕರಣದ (ಬಿ) ಖಂಡ, (ಸಿ) ಖಂಡ, (ಹೆಚ್) ಖಂಡಗಳ ಉಪಬಂಧಗಳನ್ನು ಪಾಲಿಸುವಲ್ಲಿ ಕರ್ತವ್ಯಲೋಪ ಎಸಗಿದ್ದಲ್ಲಿ, ಅಂಥ ಉಲ್ಲಂಘನೆಯ ಸಮಯದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರ ನಿರ್ವಹಣೆಗಾಗಿ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಹಾಗೂ ಕಂಪನಿಯು ಸದರಿ ಉಪಬಂಧಗಳನ್ನು ಉಲ್ಲಂಘಿಸಿ ಕಾರ್ಯನಿರ್ವಹಿಸಿರುವುದಾಗಿ ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ಕಾನೂನು ಕ್ರಮಕ್ಕೆ ಮತ್ತು ತದನುಸಾರವಾಗಿ 26ನೇ ಪ್ರಕರಣದ ಮೇರೆಗಿನ ದಂಡಕ್ಕೆ ಗುರಿಯಾಗತಕ್ಕದ್ದು:

ಪರಂತು, ಅಂಥ ಯಾರೇ ವ್ಯಕ್ತಿಯು ಮೇಲೆ ಹೇಳಿದ ಉಪಬಂಧಗಳ ಉಲ್ಲಂಘನೆಯು ತನಗೆ ತಿಳಿಯದೆಯೇ ನಡೆದಿದೆಯೆಂದು ಅಥವಾ ಅವನು ಹಿಂದೆ ಹೇಳಿದ ಉಪಬಂಧಗಳ ಉಲ್ಲಂಘನೆಯನ್ನು ತಡೆಯಲು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅವನು ರುಜುವಾತುಪಡಿಸಿದರೆ ಈ ಉಪಪ್ರಕರಣದಲ್ಲಿ ಇರುವುದು ಯಾವುದೂ, ಈ ಅಧಿನಿಯಮದಲ್ಲಿ ಉಪಬಂಧಿಸಿದ ದಂಡಕ್ಕೆ ಅವನನ್ನು ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, 14ನೇ ಪ್ರಕರಣದ (ಸಿ) ಖಂಡ ಅಥವಾ (ಡಿ) ಖಂಡ ಅಥವಾ (ಹೆಚ್) ಖಂಡ ಅಥವಾ (ಐ) ಖಂಡ ಅಥವಾ (ಕೆ) ಖಂಡ ಅಥವಾ (ಎಲ್) ಖಂಡ ಅಥವಾ (ಎನ್) ಖಂಡ ಅಥವಾ (ಆರ್) ಖಂಡ ಅಥವಾ (ಎಸ್) ಖಂಡಗಳ ಅಥವಾ 15ನೇ ಪ್ರಕರಣದ (ಬಿ) ಖಂಡ ಅಥವಾ (ಸಿ) ಖಂಡ ಅಥವಾ (ಹೆಚ್) ಖಂಡಗಳ ಉಪಬಂಧಗಳ ಉಲ್ಲಂಘನೆಯನ್ನು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯೊಂದಿಗೆ ಅಥವಾ ಪರೋಕ್ಷ ಸಮ್ಮತಿಯೊಂದಿಗೆ ಮಾಡಲಾಗಿದೆಯೆಂದು ಅಥವಾ ಯಾವುದೇ ನಿರ್ಲಕ್ಷ್ಯತೆಯಿಂದ ಮಾಡಲಾಗಿದೆಯೆಂದು ಆರೋಪಿಸಬಹುದಾಗಿರುವಲ್ಲಿ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯು ಸದರಿ ಉಪಬಂಧಗಳನ್ನು ಉಲ್ಲಂಘಿಸಿರುವುದಾಗಿ ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ದಂಡಕ್ಕೆ ಗುರಿಯಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ "ಕಂಪನಿ" ಎಂದರೆ ನಿಗಮಿತ ನಿಕಾಯ ಎಂದು ಅರ್ಥ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ.

**49. ಆದಾಯ ತೆರಿಗೆಯಿಂದ ವಿನಾಯಿತಿ.–** ಆದಾಯ ತೆರಿಗೆ ಅಧಿನಿಯಮ, 1961 ರಲ್ಲಿ (1961ರ 43) ಅಥವಾ ಆದಾಯದ, ಲಾಭಗಳ ಅಥವಾ ಗಳಿಕೆಗಳ ಮೇಲಿನ ತೆರಿಗೆಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮಿತಿಯಲ್ಲಿ ಏನೇ ಒಳಗೊಂಡಿದ್ದಾಗ್ಯೂ,–

(ಎ) ಬ್ಯೂರೋ;

(ಬಿ) ಅಸ್ತಿತ್ವದಲ್ಲಿರುವ ಇಂಧನಶಕ್ತಿ ವ್ಯವಸ್ಥಾಪನಾ ಕೇಂದ್ರವು ಅದರ ರಚನೆಯ ದಿನಾಂಕದಿಂದ ಬ್ಯೂರೋದ ಸ್ಥಾಪನೆಯ ದಿನಾಂಕದವರೆಗೆ

– ಪಡೆದ ಆದಾಯ, ಲಾಭಗಳ ಅಥವಾ ಗಳಿಕೆಗಳ ಸಂದರ್ಭದಲ್ಲಿ ಯಾವುದೇ ಆದಾಯ ತೆರಿಗೆ ಅಥವಾ ಯಾವುದೇ ತೆರಿಗೆಯನ್ನು ಪಾವತಿ ಮಾಡಲು ಬದ್ಧವಾಗಿರತಕ್ಕದ್ದಲ್ಲ.

**50. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.**– ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ವಿನಿಯಮನಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಕೇಂದ್ರ ಸರ್ಕಾರದ ಅಥವಾ ಮಹಾನಿರ್ದೇಶಕನ ಅಥವಾ ಕಾರ್ಯದರ್ಶಿಯ ಅಥವಾ ರಾಜ್ಯ ಸರ್ಕಾರದ ಅಥವಾ ಆ ಸರ್ಕಾರಗಳ ಅಥವಾ ರಾಜ್ಯ ಆಯೋಗದ ಯಾರೇ ಅಧಿಕಾರಿ ಅಥವಾ ಅದರ ಸದಸ್ಯರು ಅಥವಾ ಬ್ಯೂರೋದ ಯಾರೇ ಅಧಿಕಾರಿ ಅಥವಾ ಇತರ ನೌಕರನ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**51. ಪ್ರತ್ಯಾಯೋಜನೆ.**– ಬ್ಯೂರೋ ಲಿಖಿತದಲ್ಲಿನ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಯಾರೇ ಸದಸ್ಯನಿಗೆ, ಸಮಿತಿಯ ಸದಸ್ಯನಿಗೆ, ಬ್ಯೂರೋದ ಅಧಿಕಾರಿಗೆ ಅಥವಾ ಯಾರೇ ಇತರ ವ್ಯಕ್ತಿಗೆ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಯಾವುವಾದರೂ ಇದ್ದರೆ ಅವುಗಳಿಗೆ ಒಳಪಟ್ಟು, ಅದು ಸೂಕ್ತವೆಂದು ಭಾವಿಸಬಹುದಾದಂತೆ ಈ ಅಧಿನಿಯಮದ ಮೇರೆಗಿನ (58ನೇ ಪ್ರಕರಣದ ಮೇರೆಗಿನ ಅಧಿಕಾರಗಳನ್ನು ಹೊರತುಪಡಿಸಿ) ತನ್ನ ಅಂಥ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಪ್ರತ್ಯಾಯೋಜಿಸಬಹುದು.

**52. ಮಾಹಿತಿಯನ್ನು ಪಡೆಯಲು ಅಧಿಕಾರ.**– 14ನೇ ಪ್ರಕರಣದ (ಬಿ) ಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ಸಾಧನಸಾಮಗ್ರಿಗಳ ಅಥವಾ ಉಪಕರಣಗಳ ಪ್ರತಿಯೊಬ್ಬ ಹೆಸರಿಸಿದ ಬಳಕೆದಾರನು ಅಥವಾ ತಯಾರಕನು ಬ್ಯೂರೋ ಅಗತ್ಯಪಡಿಸಬಹುದಾದಂಥ ಯಾವುದೇ ಮಾಹಿತಿಯನ್ನು ಮತ್ತು ಯಾವುದೇ ಸಾಧನ ಸಾಮಗ್ರಿ ಅಥವಾ ಉಪಕರಣದ ಸಂಬಂಧದಲ್ಲಿ ಬಳಸಲಾದ ಯಾವುದೇ ಸಾಮಗ್ರಿ ಅಥವಾ ವಸ್ತುವಿನ ಅಂಥ ಮಾದರಿಗಳನ್ನು ಪೂರೈಸತಕ್ಕದ್ದು.

**53. ವಿನಾಯಿತಿ ನೀಡಲು ಅಧಿಕಾರ.**– ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯಲ್ಲಿ ಈ ಅಧಿನಿಯಮದ ಎಲ್ಲಾ ಉಪಬಂಧಗಳ ಅಥವಾ ಯಾವುದೇ ಉಪಬಂಧದ ಅನ್ವಯದಿಂದ ಯಾರೇ ಹೆಸರಿಸಲಾದ ಬಳಕೆದಾರನಿಗೆ ಅಥವಾ ಹೆಸರಿಸಲಾದ ಬಳಕೆದಾರರ ವರ್ಗಕ್ಕೆ ವಿನಾಯತಿ ನೀಡುವುದು ಅವಶ್ಯಕವೆಂದು ಅಥವಾ ಯುಕ್ತವೆಂದು ಅಭಿಪ್ರಾಯಪಟ್ಟರೆ, ಅಧಿಸೂಚನೆಯ ಮೂಲಕ ಮತ್ತು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಹಾಗೆ ವಿನಾಯಿತಿ ನೀಡಬಹುದು:

ಪರಂತು, ಸಂದರ್ಭಾನುಸಾರ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಯಾರೇ ಹೆಸರಿಸಲಾದ ಬಳಕೆದಾರನಿಗೆ ಅಥವಾ ಹೆಸರಿಸಲಾದ ಬಳಕೆದಾರರ ವರ್ಗಕ್ಕೆ ಐದು ವರ್ಷಗಳಿಗೆ ಮೀರಿದ ಅವಧಿಗಾಗಿ ವಿನಾಯಿತಿಯನ್ನು ನೀಡತಕ್ಕದ್ದಲ್ಲ:

ಮತ್ತೂ ಪರಂತು, ಸಂದರ್ಭಾನುಸಾರ, ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಂಥ ವಿನಾಯಿತಿಯನ್ನು ನೀಡುವ ಮುಂಚೆ ಇಂಧನಶಕ್ತಿ ಕಾರ್ಯಕ್ಷಮತಾ ಬ್ಯೂರೋದೊಂದಿಗೆ ಸಮಾಲೋಚಿಸತಕ್ಕದ್ದು.

**54. ಅಪೀಲು ನ್ಯಾಯಾಧಿಕರಣದ ಅಧ್ಯಕ್ಷ, ಸದಸ್ಯರು, ಅಧಿಕಾರಿಗಳು ಮತ್ತು ನೌಕರರು, ರಾಜ್ಯ ಆಯೋಗದ ಸದಸ್ಯರು, ಬ್ಯೂರೋದ ಮಹಾನಿರ್ದೇಶಕ, ಕಾರ್ಯದರ್ಶಿ, ಸದಸ್ಯರು, ಅಧಿಕಾರಿಗಳು ಮತ್ತು ನೌಕರರು ಲೋಕ ನೌಕರರಾಗಿರುವುದು.**– ಅಪೀಲು ನ್ಯಾಯಾಧಿಕರಣದ ಅಧ್ಯಕ್ಷ ಅಥವಾ ಅಪೀಲು ನ್ಯಾಯಾಧಿಕರಣದ ಸದಸ್ಯರು ಅಥವಾ ಅಪೀಲು ನ್ಯಾಯಾಧಿಕರಣದ ಅಧಿಕಾರಿಗಳು ಅಥವಾ ನೌಕರರು ಅಥವಾ ರಾಜ್ಯ ಆಯೋಗದ ಸದಸ್ಯರು, ಅಥವಾ ಬ್ಯೂರೋದ ಸದಸ್ಯರು, ಮಹಾನಿರ್ದೇಶಕ, ಕಾರ್ಯದರ್ಶಿ, ಅಧಿಕಾರಿಗಳು ಮತ್ತು ಇತರ ನೌಕರರು, ಈ ಅಧಿನಿಯಮದ ಯಾವುವೇ ಉಪಬಂಧಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸುವಾಗ ಅಥವಾ ಕಾರ್ಯನಿರ್ವಹಿಸುವರೆಂದು ತಾತ್ಪರ್ಯವಾಗುವಾಗ, ಭಾರತ ದಂಡ ಸಂಹಿತೆಯ 21ನೇ ಪ್ರಕರಣದ (1860ರ 45) ಅರ್ಥವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕದ್ದು.

**55. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.**– (1) ಕೇಂದ್ರಸರ್ಕಾರವು, ರಾಜ್ಯದಲ್ಲಿ ಈ ಅಧಿನಿಯಮವನ್ನು ಅನುಷ್ಠಾನಗೊಳಿಸುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಅಥವಾ ಬ್ಯೂರೋಗೆ ನಿರ್ದೇಶನಗಳನ್ನು ನೀಡಬಹುದು.

**56. ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.**– (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಮುಂದಿನ ಎಲ್ಲಾ ವಿಷಯಗಳಿಗೆ ಅಥವಾ ಯಾವುದೇ ವಿಷಯಕ್ಕೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 4ನೇ ಪ್ರಕರಣದ (2)ನೇ ಉಪಪ್ರಕರಣದ (ಓ), (ಪಿ) ಮತ್ತು (ಕ್ಯೂ) ಖಂಡಗಳ ಮೇರೆಗೆ ಕೇಂದ್ರ ಸರ್ಕಾರವು ಸದಸ್ಯರೆಂದು ನೇಮಕಮಾಡುವ ವ್ಯಕ್ತಿಗಳ ಅಂಥ ಸಂಖ್ಯೆ;

(ಬಿ) 4ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಸದಸ್ಯರಿಗೆ ಸಂದಾಯ ಮಾಡಬೇಕಾದ ಫೀಜು ಮತ್ತು ಭತ್ಯೆಗಳು;

(ಸಿ) 9ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಬ್ಯೂರೋದ ಮಹಾನಿರ್ದೇಶಕನಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಮತ್ತು ಅವನ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಕಾರ್ಯದರ್ಶಿಯ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಡಿ) 10ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಬ್ಯೂರೋದ ಅಧಿಕಾರಿಗಳು ಮತ್ತು ಇತರ ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಇ) 13ನೇ ಪ್ರಕರಣದ (2)ನೇ ಉಪಪ್ರಕರಣದ (ಯು) ಖಂಡದ ಮೇರೆಗೆ ನಿಯಮಿಸಬಹುದಾದಂತೆ ಬ್ಯೂರೋವು ಅಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು;

(ಎಫ್) 14ನೇ ಪ್ರಕರಣದ (ಜಿ) ಖಂಡದ ಮೇರೆಗೆ ಹೆಸರಿಸಲಾದ ಬಳಕೆದಾರರಿಗಾಗಿ ಇಂಧನಶಕ್ತಿ ಬಳಕೆಯ ಪ್ರಮಾಣಗಳು ಮತ್ತು ಮಾನಕಗಳು;

(ಜಿ) 14ನೇ ಪ್ರಕರಣದ (ಜಿ) ಖಂಡದ ಪರಂತುಕದ ಮೇರೆಗೆ ಹೆಸರಿಸಲಾದ ಬೇರೆಬೇರೆ ಬಳಕೆದಾರರಿಗಾಗಿ ಬೇರೆಬೇರೆ ಪ್ರಮಾಣಗಳನ್ನು ಮತ್ತು ಮಾನಕಗಳನ್ನು ನಿಯಮಿಸುವುದು;

(ಹೆಚ್) 14ನೇ ಪ್ರಕರಣದ (ಕೆ) ಖಂಡದ ಮೇರೆಗೆ ಇಂಧನಶಕ್ತಿಯನ್ನು ಬಳಸಿದ ಮತ್ತು ಅಂಗೀಕೃತ ಇಂಧನಶಕ್ತಿ ಸಂಪರೀಕ್ಷಕನ ಶಿಫಾರಸ್ಸಿನ ಮೇಲೆ ಕೈಗೊಂಡ ಕ್ರಮಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ಮತ್ತು ಯಾವ ಸಮಯದೊಳಗೆ ಸಲ್ಲಿಸಬೇಕೋ ಆ ನಮೂನೆ ಮತ್ತು ಆ ರೀತಿ ಮತ್ತು ಆ ಸಮಯ;

(ಐ) 14ನೇ ಪ್ರಕರಣದ (ಎಲ್) ಖಂಡದ ಮೇರೆಗೆ ಇಂಧನಶಕ್ತಿ ಬಳಕೆಯ ಸ್ಥಿತಿಗತಿಯನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸಲ್ಲಿಸಬೇಕೋ ಆ ನಮೂನೆ ಮತ್ತು ರೀತಿ;

(ಜೆ) ಇಂಧನಶಕ್ತಿ ವ್ಯವಸ್ಥಾಪಕರಿಗಾಗಿ 14ನೇ ಪ್ರಕರಣದ (ಎಲ್) ಖಂಡದ ಮೇರೆಗೆ ಕನಿಷ್ಠ ಅರ್ಹತೆಗಳು;

(ಕೆ) 14ನೇ ಪ್ರಕರಣದ (ಓ) ಖಂಡದ ಮೇರೆಗೆ ಯೋಜನೆಗಳನ್ನು ತಯಾರಿಸುವುದಕ್ಕಾಗಿ ಮತ್ತು ಅದನ್ನು ಕಾರ್ಯಗತಗೊಳಿಸುವುದಕ್ಕಾಗಿನ ನಮೂನೆ ಮತ್ತು ರೀತಿ;

(ಎಲ್) 14ನೇ ಪ್ರಕರಣದ (ಪಿ) ಖಂಡದ ಮೇರೆಗೆ ಇಂಧನಶಕ್ತಿ ಸಂರಕ್ಷಣಾ ಕಟ್ಟಡ ಸಂಹಿತೆಗಳು;

(ಎಂ) 17ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಪರಿಶೀಲನೆಗೆ ಸಂಬಂಧಿಸಿದ ವಿಷಯಗಳು;

(ಎನ್) 22ನೇ ಪ್ರಕರಣದ ಮೇರೆಗೆ ಬ್ಯೂರೋ ಯಾವ ನಮೂನೆಯಲ್ಲಿ ಮತ್ತು ಕಾಲದಲ್ಲಿ ತನ್ನ ಆಯವ್ಯಯ ಪತ್ರವನ್ನು ತಯಾರಿಸತಕ್ಕದ್ದೋ ಆ ನಮೂನೆ ಮತ್ತು ಕಾಲ;

(ಓ) 23ನೇ ಪ್ರಕರಣದ ಮೇರೆಗೆ ಬ್ಯೂರೋ ಯಾವ ನಮೂನೆಯಲ್ಲಿ ಮತ್ತು ಯಾವ ಕಾಲದಲ್ಲಿ ತನ್ನ ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದೋ ಆ ನಮೂನೆ ಮತ್ತು ಕಾಲ;

(ಪಿ) 25ನೇ ಪ್ರಕರಣದ ಮೇರೆಗೆ ಬ್ಯೂರೋ ಯಾವ ನಮೂನೆಯಲ್ಲಿ ಲೆಕ್ಕಗಳನ್ನು ಇಟ್ಟುಕೊಂಡು ಬರಬೇಕಾಗಿದೆಯೋ ಆ ಲೆಕ್ಕಗಳ ನಮೂನೆ;

(ಕ್ಯೂ) 27ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಿಚಾರಣೆ ನಡೆಸುವ ರೀತಿ;

(ಆರ್) 31ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಪೀಲನ್ನು ಸಲ್ಲಿಸುವುದಕ್ಕೆ ಸಂಬಂಧಿಸಿದ ನಮೂನೆ ಮತ್ತು ಫೀಜು;

(ಎಸ್) 35ನೇ ಪ್ರಕರಣದ ಮೇರೆಗೆ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷನಿಗೆ ಮತ್ತು ಅಪೀಲು ನ್ಯಾಯಾಧಿಕರಣದ ಸದಸ್ಯರಿಗೆ ಸಂದಾಯವಾಗಬೇಕಾದ ಸಂಬಳ ಮತ್ತು ಭತ್ಯೆಗಳು ಮತ್ತು ಇತರ ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು;

(ಟಿ) 39ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅಪೀಲು ನ್ಯಾಯಾಧಿಕರಣದ ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳ ಮತ್ತು ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು;

(ಯು) ಯಾವ ಹೆಚ್ಚುವರಿ ವಿಷಯಗಳಿಗೆ ಸಂಬಂಧಿಸಿದಂತೆ ಅಪೀಲು ನ್ಯಾಯಾಧಿಕರಣವು 40ನೇ ಪ್ರಕರಣದ (2)ನೇ ಉಪಪ್ರಕರಣದ (i)ನೇ ಖಂಡದ ಮೇರೆಗೆ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸಬಹುದೋ ಆ ಹೆಚ್ಚುವರಿ ವಿಷಯಗಳು;

(ವಿ) ನಿಯಮಗಳ ಮೂಲಕ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಅಥವಾ ಉಪಬಂಧವನ್ನು ಕಲ್ಪಿಸಬೇಕಾದ ಅಥವಾ ಕಲ್ಪಿಸಬಹುದಾದ ಇತರ ಯಾವುದೇ ವಿಷಯ.

**57. ನಿಯಮಗಳನ್ನು ರಚಿಸಲು ರಾಜ್ಯ ಸರ್ಕಾರದ ಅಧಿಕಾರ.–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಮತ್ತು ಕೇಂದ್ರ ಸರ್ಕಾರವು ರಚಿಸಿದ ಯಾವುವೇ ನಿಯಮಗಳಿಗೆ ಅಸಂಗತವಾಗದಂತೆ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಈ ಮುಂದಿನ ಎಲ್ಲಾ ವಿಷಯಗಳಿಗಾಗಿ ಅಥವಾ ಯಾವುದೇ ವಿಷಯಕ್ಕಾಗಿ ಅಂಥ ನಿಯಮಗಳಲ್ಲಿ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) 15ನೇ ಪ್ರಕರಣದ (ಎ) ಖಂಡದ ಮೇರೆಗಿನ ಇಂಧನಶಕ್ತಿ ಸಂರಕ್ಷಣಾ ಕಟ್ಟಡ ಸಂಹಿತೆಗಳು;

(ಬಿ) 15ನೇ ಪ್ರಕರಣದ (ಹೆಚ್) ಖಂಡದ ಮೇರೆಗೆ ಇಂಧನಶಕ್ತಿ ಬಳಕೆಗೆ ಸಂಬಂಧಿಸಿದಂತೆ ಯಾವ ನಮೂನೆಯಲ್ಲಿ, ಯಾವ ರೀತಿಯಲ್ಲಿ ಮತ್ತು ಯಾವ ಅವಧಿಯೊಳಗೆ ಮಾಹಿತಿಯನ್ನು ಸಲ್ಲಿಸತಕ್ಕದ್ದೋ ಆ ನಮೂನೆ, ರೀತಿ ಮತ್ತು ಅವಧಿ;

(ಸಿ) 16ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ನಿಧಿಯನ್ನು ನಿರ್ವಹಿಸತಕ್ಕ ವ್ಯಕ್ತಿ ಅಥವಾ ಯಾವುದೇ ಪ್ರಾಧಿಕಾರ ಮತ್ತು ನಿಧಿಯನ್ನು ನಿರ್ವಹಿಸತಕ್ಕ ರೀತಿ;

(ಡಿ) 17ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಪರಿಶೀಲನೆಯ ಉದ್ದೇಶಗಳಿಗಾಗಿ ಸೇರಿಸಬೇಕಾದ ವಿಷಯಗಳು;

(ಇ) ನಿಯಮಗಳ ಮೂಲಕ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಅಥವಾ ಉಪಬಂಧವನ್ನು ಕಲ್ಪಿಸಬೇಕಾದ ಅಥವಾ ಕಲ್ಪಿಸಬಹುದಾದ ಇತರ ಯಾವುದೇ ವಿಷಯ.

**58. ವಿನಿಯಮನಗಳನ್ನು ರಚಿಸಲು ಬ್ಯೂರೋದ ಅಧಿಕಾರ.–** (1) ಬ್ಯೂರೋ, ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು ಮತ್ತು ಪೂರ್ವ ಪ್ರಕಟಣೆಯ ಷರತ್ತುಗಳಿಗೆ ಒಳಪಟ್ಟು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅಸಂಗತವಾಗದಂತೆ ವಿನಿಯಮನಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ವಿನಿಯಮನಗಳಲ್ಲಿ ಈ ಮುಂದಿನ ಎಲ್ಲಾ ವಿಷಯಗಳ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) 5ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಆಡಳಿತ ಪರಿಷತ್ತಿನ ಸಭೆಗಳು ನಡೆಯುವ ಸಮಯ ಮತ್ತು ಸ್ಥಳಗಳು ಮತ್ತು ಅಂಥ ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(ಬಿ) 8ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ರಚಿಸಿದ ಸಲಹಾ ಸಮಿತಿಗಳ ಸದಸ್ಯರು;

(ಸಿ) 9ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಬ್ಯೂರೋದ ಮಹಾನಿರ್ದೇಶಕನು ಚಲಾಯಿಸಬಹುದಾದ ಮತ್ತು ನಿರ್ವಹಿಸಬಹುದಾದ ಅಧಿಕಾರಗಳು ಮತ್ತು ಕರ್ತವ್ಯಗಳು;

(ಡಿ) 13ನೇ ಪ್ರಕರಣದ (2)ನೇ ಉಪಪ್ರಕರಣದ (ಎನ್) ಖಂಡದ ಮೇರೆಗೆ ಇಂಧನಶಕ್ತಿಯ ಸಮರ್ಥ ಬಳಕೆಯನ್ನು ಮತ್ತು ಅದರ ಸಂರಕ್ಷಣೆಯನ್ನು ಉತ್ತೇಜಿಸುವುದಕ್ಕಾಗಿ ಒದಗಿಸಿದ ಸೇವೆಗಳಿಗಾಗಿ ಫೀಜನ್ನು ವಿಧಿಸುವುದು;

(ಇ) 13ನೇ ಪ್ರಕರಣದ (2)ನೇ ಉಪಪ್ರಕರಣದ (ಓ) ಖಂಡದ ಮೇರೆಗೆ ಅಂಗೀಕೃತ ಇಂಧನಶಕ್ತಿ ಸಂಪರೀಕ್ಷಕರ ಪಟ್ಟಿ;

(ಎಫ್) 13ನೇ ಪ್ರಕರಣದ (2)ನೇ ಉಪಪ್ರಕರಣದ (ಪಿ) ಖಂಡದ ಮೇರೆಗೆ ಅಂಗೀಕೃತ ಇಂಧನಶಕ್ತಿ ಸಂಪರೀಕ್ಷಕರ ಅರ್ಹತೆಗಳು;

(ಜಿ) 13ನೇ ಪ್ರಕರಣದ (2)ನೇ ಉಪಪ್ರಕರಣದ (ಕ್ಯೂ) ಖಂಡದ ಮೇರೆಗೆ ಇಂಧನಶಕ್ತಿ ಸಂಪರೀಕ್ಷೆಯನ್ನು ಯಾವ ರೀತಿಯಲ್ಲಿ ಮತ್ತು ಯಾವ ಮಧ್ಯಂತರ ಅವಧಿಯಲ್ಲಿ ನಡೆಸತಕ್ಕದ್ದೋ ಆ ರೀತಿ ಮತ್ತು ಆ ಮಧ್ಯಂತರ ಅವಧಿಗಳು;

(ಹೆಚ್) 13ನೇ ಪ್ರಕರಣದ (2)ನೇ ಉಪಪ್ರಕರಣದ (ಆರ್) ಖಂಡದ ಮೇರೆಗೆ ಇಂಧನಶಕ್ತಿ ವ್ಯವಸ್ಥಾಪಕರಿಗಾಗಿ ಅಧಿಪ್ರಮಾಣೀಕರಣ ಪ್ರಕ್ರಿಯೆ;

(ಐ) 14ನೇ ಪ್ರಕರಣದ (ಡಿ) ಖಂಡದ ಮೇರೆಗೆ ಗುರುತು ಚೀಟಿಯ ಮೇಲೆ ಪ್ರದರ್ಶಿಸಲು ಅಗತ್ಯಪಡಿಸಲಾದ ವಿವರಗಳು ಮತ್ತು ಅವುಗಳನ್ನು ಪ್ರದರ್ಶಿಸುವ ರೀತಿ;

(ಜೆ) 14ನೇ ಪ್ರಕರಣದ (ಹೆಚ್) ಖಂಡದ ಅಥವಾ (ಎಸ್) ಖಂಡದ ಮೇರೆಗೆ ಇಂಧನಶಕ್ತಿ ಸಂಪರೀಕ್ಷೆಯನ್ನು ನಡೆಸಬೇಕಾದ ರೀತಿ ಮತ್ತು ಮಧ್ಯಂತರ ಅವಧಿ;

(ಕೆ) 15ನೇ ಪ್ರಕರಣದ (ಸಿ) ಖಂಡದ ಮೇರೆಗೆ ಅಂಗೀಕೃತ ಇಂಧನಶಕ್ತಿ ಸಂಪರೀಕ್ಷಕರು ಇಂಧನಶಕ್ತಿ ಸಂಪರೀಕ್ಷೆಯನ್ನು ನಡೆಸಬೇಕಾದ ರೀತಿ ಮತ್ತು ಮಧ್ಯಂತರ ಅವಧಿ;

(ಎಲ್) ನಿರ್ದಿಷ್ಟಪಡಿಸಬೇಕಾದ ಅಥವಾ ನಿರ್ದಿಷ್ಟಪಡಿಸಬಹುದಾದಂಥ ಇತರ ಯಾವುದೇ ವಿಷಯ.

**59. ನಿಯಮಗಳನ್ನು ಮತ್ತು ವಿನಿಯಮನಗಳನ್ನು ಸಂಸತ್ತಿನ ಮತ್ತು ರಾಜ್ಯ ವಿಧಾನ ಮಂಡಲದ ಮುಂದೆ ಇಡುವುದು.–** (1) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಪ್ರತಿಯೊಂದು ವಿನಿಯಮನವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಕ್ಕೆ ಅಥವಾ ಒಂದಾದಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ವಿನಿಯಮನದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಅಥವಾ ವಿನಿಯಮನವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಅಥವಾ ವಿನಿಯಮನವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ, ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ವಿನಿಯಮನದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟುಮಾಡತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲವು ಎರಡು ಸದನಗಳನ್ನು ಹೊಂದಿದ್ದರೆ ಅದರ ಪ್ರತಿಯೊಂದು ಸದನದ ಮುಂದೆ, ಅಥವಾ ಅಂಥ ವಿಧಾನಮಂಡಲವು ಒಂದು ಸದನವನ್ನು ಹೊಂದಿದ್ದರೆ ಆ ಸದನದ ಮುಂದೆ ಅದನ್ನು ಮಂಡಿಸತಕ್ಕದ್ದು.

**60. ಇತರ ಕಾನೂನುಗಳ ಅನ್ವಯವು ಪ್ರತಿಷೇಧಿತವಾಗಿರತಕ್ಕದ್ದಲ್ಲ.–** ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಪೂರಕವಾಗಿರತಕ್ಕದ್ದೇ ಹೊರತು ಅವುಗಳನ್ನು ಕುಂಠಿತಗೊಳಿಸತಕ್ಕದ್ದಲ್ಲ.

**61. ಕೆಲವು ಸಂದರ್ಭಗಳಲ್ಲಿ ಅಧಿನಿಯಮದ ಉಪಬಂಧಗಳು ಅನ್ವಯಿಸದಿರುವುದು.–** ಈ ಅಧಿನಿಯಮದ ಉಪಬಂಧಗಳು, ರಕ್ಷಣೆ, ಅಣುಶಕ್ತಿಗಳ ಬಗ್ಗೆ ವ್ಯವಹರಿಸುವ ಕೇಂದ್ರ ಸರ್ಕಾರದ ಮಂತ್ರಾಲಯಗಳಿಗೆ ಅಥವಾ ಇಲಾಖೆಗಳಿಗೆ ಅಥವಾ ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದ ಮಂತ್ರಾಲಯಗಳ ಅಥವಾ ಇಲಾಖೆಗಳ ನಿಯಂತ್ರಣದಲ್ಲಿರುವ ಅಂಥಹುದೇ ಇತರ ಮಂತ್ರಾಲಯಗಳಿಗೆ ಅಥವಾ ಇಲಾಖೆಗಳಿಗೆ ಅಥವಾ ಉದ್ಯಮ ಸಂಸ್ಥೆಗಳಿಗೆ ಅಥವಾ ಮಂಡಳಿಗಳಿಗೆ, ಸಂಸ್ಥೆಗಳಿಗೆ ಅನ್ವಯವಾಗತಕ್ಕದ್ದಲ್ಲ.

**62. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಲಾದ ಆದೇಶದ ಮೂಲಕ, ತೊಂದರೆಗಳ ನಿವಾರಣೆಗಾಗಿ ಅವಶ್ಯಕವೆಂದು ಕಂಡುಬರಬಹುದಾದಂತೆ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಮೇರೆಗೆ ಅಂಥ ಯಾವುದೇ ಆದೇಶವನ್ನು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

## ಅನುಸೂಚಿ

[2(ಎಸ್) ಪ್ರಕರಣ ನೋಡಿ]

### ಹೆಸರಿಸಲಾದ ಬಳಕೆದಾರರೆಂದು ನಿರ್ದಿಷ್ಟಪಡಿಸಿದ ಅಧಿಕ ಇಂಧನಶಕ್ತಿ ಬಳಸುವ ಕೈಗಾರಿಕೆಗಳ ಮತ್ತು ಇತರ ಕಾರ್ಯಸಂಸ್ಥೆಗಳ ಪಟ್ಟಿ

1. ಅಲ್ಯುಮಿನಿಯಂ;
2. ರಸಗೊಬ್ಬರಗಳು;
3. ಕಬ್ಬಿಣ ಮತ್ತು ಉಕ್ಕು;
4. ಸಿಮೆಂಟ್;
5. ಪಲ್ಪ್ ಮತ್ತು ಕಾಗದಗಳು;

6. ಕ್ಲೋರ್ ಅಲ್‌ಕಲಿ;
7. ಸಕ್ಕರೆ;
8. ಜವಳಿ;
9. ರಾಸಾಯನಿಕಗಳು;
10. ರೈಲ್ವೆಗಳು;
11. ಬಂದರು ಟ್ರಸ್ಟ್;
12. ಸಾರಿಗೆ ವಲಯ (ಕೈಗಾರಿಕೆಗಳು ಮತ್ತು ಸೇವೆಗಳು);
13. ಪೆಟ್ರೋಕೆಮಿಕಲ್, ಗ್ಯಾಸ್ ಕ್ರಾಕರ್‌ಗಳು, ನಫ್ತಾ ಕ್ರಾಕರ್ಸ್ ಮತ್ತು ಪೆಟ್ರೋಲಿಯಂ ಶುದ್ಧೀಕರಣ ಸ್ಥಾವರಗಳು;
14. ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳು, ಜಲ ವಿದ್ಯುತ್ ಕೇಂದ್ರಗಳು, ವಿದ್ಯುತ್ ಪ್ರಸರಣ ಕಂಪನಿಗಳು ಮತ್ತು ವಿತರಣ ಕಂಪನಿಗಳು;
15. ವಾಣಿಜ್ಯ ಕಟ್ಟಡಗಳು ಅಥವಾ ಕಾರ್ಯಸಂಸ್ಥೆಗಳು.

* * * * *